بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಸಂಚಿಕೆ: 13

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಮಾರ್ಚ್ 2024, 28 ಅಮಾನ್ 1403 ಹಿಜರಿ ಶಮ್ಸಿ,
17 ರಮಝಾನ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

شَهْرُ رَمَضَانَ الَّذِيْۤ اُنْزِلَ فِيْهِ الْقُرْاٰنُ
هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ
فَمَنْ شَهِدَ مِنْكُمُ الشَّهْرَ فَلْيَصُمْهُ (بقرہ: 186)

**(ಅಲ್-ಬಖರ: 186)**

**ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸೆಹ್ರಿ ತಿನ್ನುವುದರಲ್ಲಿ ಅನುಗ್ರಹವಿದೆ

**(1923)** ಹಝ್ರತ್ ಅನಸ್ ಬಿನ್ ಮಲಿಕ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಸೆಹ್ರಿಯನ್ನು ತಿನ್ನಿರಿ ಏಕೆಂದರೆ ಸೆಹ್ರಿ ಅನುಗ್ರಹಿಸಲ್ಪಟ್ಟಿದೆ.

### ತಪ್ಪಿ ತಿಂದು ಕುಡಿದವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು

**(1933)** ಹಝ್ರತ್ ಅಬುಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಒಬ್ಬ ವ್ಯಕ್ತಿಯು ಉಪವಾಸದಲ್ಲಿ ತಪ್ಪಾಗಿ ತಿಂದರೆ ಅಥವ ಕುಡಿದರೆ, ಅವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು ಏಕೆಂದರೆ ಅಲ್ಲಾಹನು ಅವನಿಗೆ ತಿನ್ನಿಸಿರುವುದು ಮತ್ತು ಕುಡಿಸಿರುವುದು.

### ಪ್ರಯಾಣದಲ್ಲಿ ಉಪವಾಸವು ಪುಣ್ಯವಲ್ಲ

**(1946)** ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಪ್ರವಾದಿ ಮುಹಮ್ಮದ್(ಸ) ಪ್ರಯಾಣದಲ್ಲಿದ್ದಾಗ ಒಂದು ಜನಜಂಗುಳಿಯನ್ನು ಮತ್ತು ಒಬ್ಬ ವ್ಯಕ್ತಿಯನ್ನು ನೋಡಿದರು. ಅವರು ಹೇಳಿದರು: ಇದು ಏನು? ಅದಕ್ಕೆ ಜನರು ಹೇಳಿದರು: ಓರ್ವ ಉಪವಾಸಿಗನಾಗಿದ್ದಾನೆ ಅದಕ್ಕೆ ಅವರು ಹೇಳಿದರು: ಪ್ರಯಾಣ ಮಾಡುವಾಗ ಉಪವಾಸದಿಂದ ಯಾವುದೇ ಪ್ರಯೋಜನವಿಲ್ಲ.

### ರಮಝಾನ್‌ನ ಬಿಟ್ಟು ಹೋಗಿರುವ ಉಪವಾಸಗಳು

**(1950)** ಅಬು ಸಲ್ಮ ಅವರಿಂದ ವರದಿಯಾಗಿದೆ: ಅವರು ಹೇಳಿದರು: ಹಝ್ರತ್ ಆಯೆಶಾ(ರ) ಹೇಳುವುದನ್ನು ನಾನು ಕೇಳಿದ್ದೇನೆ: ರಮಝಾನ್ ಉಪವಾಸವು ನನ್ನ ಮೇಲೆ ಕಡ್ಡಾಯವಾದಾಗ ನಾನು ಅವುಗಳನ್ನು ಪೂರ್ಣಗೊಳಿಸದಿದ್ದರೆ ನಾನು ಅವುಗಳನ್ನು ಶಾಅ್‌ಬಾನ್ ಮಾಸದಲ್ಲಿ ಪೂರೈಸುತ್ತಿದ್ದೆ. ಯಾಹ್ಯಾ ಹೇಳಿದರು: ಪ್ರವಾದಿ(ಸ) ರವರ ಕಾರ್ಯಮಗ್ನತೆಯಿಂದಾಗಿ ಅಥವಾ ಅವರು ಪ್ರವಾದಿ(ಸ) ಅವರ ಸೇವೆಯಲ್ಲಿ ನಿರತರಾಗಿದ್ದರಿಂದ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

## ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.

اللہ تعالیٰ قرآن کریم میں فرماتا ہے:: شَهْرُ رَمَضَانَ الَّذِيْۤ اُنْزِلَ فِيْهِ الْقُرْاٰنُ هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ فَمَنْ شَهِدَ مِنْكُمُ الشَّهْرَ فَلْيَصُمْهُ ۗ وَمَنْ كَانَ مَرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ۗ يُرِيْدُ اللّٰهُ بِكُمُ الْيُسْرَ وَلَا يُرِيْدُ بِكُمُ الْعُسْرَ ۫ وَلِتُكْمِلُوا الْعِدَّةَ وَلِتُكَبِّرُوا اللّٰهَ عَلٰى مَا هَدٰىكُمْ وَلَعَلَّكُمْ تَشْكُرُوْنَ ﴿۱۸۶﴾ وَاِذَا سَاَلَكَ عِبَادِيْ عَنِّيْ فَاِنِّيْ قَرِيْبٌ ۗ اُجِيْبُ دَعْوَةَ الدَّاعِ اِذَا دَعَانِ ۙ فَلْيَسْتَجِيْبُوْا لِيْ وَلْيُؤْمِنُوْا بِيْ لَعَلَّهُمْ يَرْشُدُوْنَ ﴿۱۸۷﴾ (بقرہ: 186-187)

ಅಂದರೆ :: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ.ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ. (ಎಲೈ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು)- ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. **(ಅಲ್‌ಬಖರ:186-187)**

**ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲ ಈ ಪವಿತ್ರ ಮಾಸದಲ್ಲಿ ನೀನು ನನ್ನನ್ನು ವಂಚಿತಗೊಳಿಸಬೇಡ ಎಂದು ಓರ್ವ ವ್ಯಕ್ತಿಯು ಪ್ರಾಮಾಣಿಕವಾಗಿ ಸರ್ವಶಕ್ತನಲ್ಲಿ ಕೇಳಿಕೊಂಡರೆ, ಅಲ್ಲಾಹನು ಅವನನ್ನು ವಂಚಿತಗೊಳಿಸುವುದಿಲ್ಲ.**

**ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮನುಷ್ಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲ್ಲಾಹನ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕು. ಉಪವಾಸದ ಕುರಿತು, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿಯುತ್ತಾನೆ: **ವಅನ್ ತಸೂಮು ಖೈರುಲ್ಲಕುಮ್** (ಅಲ್-ಬಖರ: 185) ಅಂದರೆ: ನೀವು ಉಪವಾಸವನ್ನು ಅನುಷ್ಠಿಸಿದರೆ ಅದು ನಿಮಗಾಗಿ ಬಹಳ ಅನುಗ್ರಹದಾಯಕವಾಗಿದೆ.

ಫಿದ್ಯ (ಓರ್ವ ನಿರ್ಗತಿಕನಿಗೆ ಆಹಾರ ನೀಡುವುದು) ಏಕೆ ವಿಧಿಸಲ್ಪಟ್ಟಿದೆಯೋ ಎಂದು ಒಮ್ಮೆ ನನ್ನ ಮನಸ್ಸಿಗೆ ಬಂದಿತು, ಆಗ ಅದು ತೌಫೀಖ್ ಪಡೆಯುವುದಕ್ಕೆ ಎಂದು ನನಗೆ ತಿಳಿಯಿತು, ಆದ್ದರಿಂದ ಆತನಿಗೆ ಉಪವಾಸ ಅನುಷ್ಠಾನಕ್ಕೆ ತೌಫೀಖ್ ಸಿಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಮಾತ್ರ ತೌಫೀಖ್ ನೀಡುವವನಾಗಿದ್ದಾನೆ. ಅದೇ ರೀತಿ ಪ್ರತಿಯೊಂದು ವಸ್ತುವು ಅಲ್ಲಾಹನಿಂದಲೇ ಬಯಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲನು ಆದ್ದರಿಂದ ಫಿದ್ಯದ ಉದ್ದೇಶವು ಆ ಶಕ್ತಿಪಡೆಯುವುದಾಗಿದೆ ಮತ್ತೆ ಇದು ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತದೆ. ನನಗೆ ಖಾತ್ರಿ ಇರುವುದೇನೆಂದರೆ ಇದೊಂದು ನಿನ್ನ ಪವಿತ್ರ ಮಾಸವಾಗಿದೆ ಅದರಿಂದ ನಾನು ವಂಚಿತನಾಗುತ್ತಿದ್ದೇನೆ ಮುಂದಿನ ವರ್ಷ ನಾನು ಬದುಕಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಾನು ಈ ತಪ್ಪಿದ ಉಪವಾಸಗಳನ್ನು ಮತ್ತೆ ಅನುಷ್ಠಿಸಲು ಸಾಧ್ಯವಾಗುತ್ತದೆಯೋ ಇಲ್ಲವೊ ನನಗೆ ತಿಳಿದಿಲ್ಲ. ಹೀಗೆ ಅವನು ಅಲ್ಲಾಹನಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದರೆ, ಅಂತಹ ಮನಸ್ಸಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ.

ಅಲ್ಲಾಹನು ಇಚ್ಛಿಸಿದ್ದರೆ, ಅವನು ಇತರ ಉಮ್ಮತ್‌ಗಳಂತೆ ಈ ಉಮ್ಮತ್ತಿನಲ್ಲಿ ಯಾವ ಮಾನದಂಡಗಳನ್ನು ಇರಿಸುತ್ತಿರಲಿಲ್ಲ, ಆದರೆ ಅವನು ಮಾನದಂಡಗಳನ್ನು ಒಳ್ಳೆಯದಕ್ಕಾಗಿ ಇರಿಸಿದ್ದಾನೆ, ನನ್ನ ದೃಷ್ಟಿಯಲ್ಲಿ ಓರ್ವ ಮನುಷ್ಯ ನೈಜ್ಯವಾಗಿ ಹಾಗೂ ಸಂಪೂರ್ಣ ವಿಧೇಯನಾಗಿ ಅಲ್ಲಾಹನ ಆಸ್ತಾನದಲ್ಲಿ ಈ ಪವಿತ್ರ ಮಾಸಲದಲ್ಲಿ ನೀನು ನನಗೆ ವಂಚಿತನಾಗಿಸಬೇಡ ಎಂದು ಕೇಳಿಕೊಂಡರೆ ಅಲ್ಲಾಹನು

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ, ಉಹುದ್ ಯುದ್ಧದ ಶಹೀದರನ್ನು ದಫನ್ ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಬಂದಾಗ ಅವರು ಹೇಳಿದರು: ಈ ಶಹೀದರನ್ನು ಅವರ ಗಾಯಗಳ ಸಮೇತವೇ ಕಫನ್ ಹೊದಿಸಿರಿ. ಏಕೆಂದರೆ ನಾನು ಅವರ ಮೇಲೆ ಸಾಕ್ಷಿಯಾಗಿದ್ದೇನೆ. ಅಲ್ಲಾಹನ ಮಾರ್ಗದಲ್ಲಿ ಗಾಯಗೊಂಡ ಪ್ರತಿಯೊಬ್ಬ ಮುಸ್ಲಿಮನು ಖಿಯಾಮತಿನ ದಿನದಂದು ಬರುವಾಗ ಅವನ ಗಾಯದಿಂದ ರಕ್ತ ಹರಿಯುತ್ತಿರುವುದು, ಅದರ ಬಣ್ಣ ಕುಂಕುಮ ಕೇಸರಿ ಆಗಿರುವುದು. ಅದರ ಸುಗಂಧ ಕಸ್ತೂರಿಯದ್ದಾಗಿರುವುದು.

ಓ ಅನ್ಸಾರರ ಗುಂಪು! ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಶಹೀದ್ ಆಗಿದ್ದರೆ ಸರ್ವಶಕ್ತನಾದ ಅಲ್ಲಾಹನು ಜೀವಂತವಾಗಿದ್ದಾನೆ ಮತ್ತು ಸಾಯಲು ಸಾಧ್ಯವಿಲ್ಲ. ನಿಮ್ಮ ಧರ್ಮಕ್ಕಾಗಿ ಹೋರಾಡಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ವಿಜಯ ಮತ್ತು ಯಶಸ್ಸನ್ನು ನೀಡುತ್ತಾನೆ.

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಮುಖೈರೀಖ್ ಯಹೂದಿಯರಲ್ಲಿ ಎಲ್ಲರಿಂದ ಪ್ರಾಧಾನ್ಯತೆ ಹೊಂದಿದ್ದನು ಮತ್ತು ಪರ್ಷಿಯಾದ ಜನರಲ್ಲಿ ಸಲ್ಮಾನ್‌ನಿಂದಲೂ ಪ್ರಾಧಾನ್ಯತೆ ಹೊಂದಿದ್ದನು ಮತ್ತು ಅಬಿಸೀನಿಯಾದ ಜನರಲ್ಲಿ ಬಿಲಾಲ್‌ನಿಂದಲೂ ಪ್ರಾದಾನ್ಯತೆ ಹೊಂದಿದ್ದನು.

ಹಝ್ರತ್ ಅಬ್ದುಲ್ಲಾ ಬಿನ್ ಜಹಶ್(ರ) ಹೇಳಿದರು: ನಾನು ಸರ್ವಶಕ್ತನಾದ ಅಲ್ಲಾಹನನ್ನು ಭೇಟಿಯಾಗಲು ಬಯಸಿದರೆ, ನಾನು ಚೆನ್ನಾಗಿ ಹೊಟ್ಟೆ ತುಂಬಿರುವ ಸ್ಥಿತಿಯಲ್ಲಿ ಅವನನ್ನು ಭೇಟಿಯಾಗಬೇಕು. ಇದು ನನ್ನ ಆಸೆಯಾಗಿದೆ, ಅದಕ್ಕಾಗಿಯೇ ನಾನು ಅದನ್ನು ಕುಡಿಯುತ್ತಿದ್ದೇನೆ.

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ಉಹುದ್ ದಿನದಂದು ಹುತಾತ್ಮರಾದ ಮೊದಲ ವ್ಯಕ್ತಿಯಾಗಿದ್ದರು. ಅವರಿಗೆ ದಫನ್ ಮಾಡುವ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಹೇಳಿದರು, ಅಬ್ದುಲ್ಲಾ ಬಿನ್ ಅಮ್ರ್(ರ) ಮತ್ತು ಅಮ್ರ್ ಬಿನ್ ಜಮುಹ್(ರ) ಅವರನ್ನು ಒಂದೇ ಖಬರ್‌ನಲ್ಲಿ ದಪನ್ ಮಾಡಿ ಏಕೆಂದರೆ ಅವರ ನಡುವೆ ಪ್ರಾಮಾಣಿಕತೆ ಮತ್ತು ಪ್ರೀತಿ ಇತ್ತು.

ಹಝ಼್ರತ್ ಇಮಾಂ ಶಾಫೀ ಹೇಳುತ್ತಾರೆ: ಅನೇಕ ವರದಿಗಳಿಂದ ಸ್ಪಷ್ಟವಾಗಿ ಗೊತ್ತಾಗುವ ಸಂಗತಿಯೇನೆಂದರೆ, ಹಝ಼್ರತ್ ಪೈಗಂಬರ್(ಸ) ಉಹುದ್ ಯುದ್ಧದ ಶಹೀದರ ಜನಾಝ಼ ನಮಾಝ಼್ ನಿರ್ವಹಿಸಿರಲಿಲ್ಲ. ಹಝ಼್ರತ್ ಪೈಗಂಬರ್(ಸ) ಆ ಶಹೀದರ ಜನಾಝ಼ ನಮಾಝ಼್ ನಿರ್ವಹಿಸಿದರು ಮತ್ತು ಹಝ಼್ರತ್ ಹಂಝ಼(ರ)ರಿಗಾಗಿ ಎಪ್ಪತ್ತು ತಕ್ಬೀರ್‌ಗಳನ್ನು ಹೇಳಿದ್ದರು ಎಂಬ ಪ್ರಸ್ತಾಪ ಬರುವ ವರದಿಗಳು ಸರಿಯಲ್ಲ. ರಸೂಲುಲ್ಲಾಹ್(ಸ) ಎಂಟು ವರ್ಷಗಳ ನಂತರ ಆ ಶಹೀದರ ಜನಾಝ಼ ನಮಾಝ಼್ ನಿರ್ವಹಿಸಿದ್ದರು ಎಂಬ ವರದಿಯ ಬಗ್ಗೆ ಹೇಳುವುದಾದರೆ, ಆ ಘಟನೆ ಎಂಟು ವರ್ಷ ನಂತರದ್ದು ಎಂದು ಆ ವರದಿಯಲ್ಲೇ ಇದೆ.

**ಉಹದ್ ಯುದ್ಧಲ್ಲಿ ಹಝ್ರತ್ ಪೈಗಂಭರ್(ಸ) ಅವರಿಗೆ ಆದ ತೊಂದರೆಗಳು ಹಾಗೂ ಸಹಾಬಿಯರ ಬಲಿದಾನಗಳ ವಿವರಾತ್ಮಕ ಪ್ರಸ್ತಾವನೆ**

**ಮನುಕುಲವನ್ನು ನಾಶದಿಂದ ರಕ್ಷಿಸಲು ದುಆ ಮಾಡಲು ಪುನಃ ಮನವಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **16–02–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಉಹುದ್ ಯುದ್ಧದ ಘಟನೆಗಳ ಬಗ್ಗೆ ಪ್ರಸ್ತಾವನೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರ ಜೀವನಚರಿತ್ರೆಯ ಅಂಶಗಳು ಮತ್ತು ಸಹಾಬಿಗಳ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಪ್ರೀತಿ ಮತ್ತು ನಿಷ್ಠೆಯನ್ನು ಉಲ್ಲೇಖಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ, ಹಝ್ರತ್ ಖಾರಿಜಾ ಬಿನ್ ಝ್ಯೈದ್(ಸ) ಅವರ ಶಹಾದತ್ ಅನ್ನು ಸಹ ಉಲ್ಲೇಖಿಸಲಾಗಿದೆ. ಹಝ್ರತ್ ಖಾರಿಜಾ(ರ) ಉಹುದ್ ಯುದ್ಧದಲ್ಲಿ ಬಹಳ ಧೈರ್ಯ ಮತ್ತು ಶೌರ್ಯದಿಂದ ಹೋರಾಡಿ ಶಹೀದ್ ಆದರು. ಅವರು ಬಾಣಗಳಿಂದ ಹೊಡೆಯಲ್ಪಟ್ಟರು ಮತ್ತು ಅವರಿಗೆ ಹದಿಮೂರಕ್ಕಿಂತ ಹೆಚ್ಚು ಗಾಯಗಳಾದವು. ಅವರು(ರ) ಗಾಯಗಳ ಕಾರಣದಿಂದ ಆಯಾಸಗೊಂಡಿದ್ದಾಗ ಸಫ್ವಾನ್ ಬಿನ್ ಉಮಯ್ಯ ಅವರ ಬಳಿಯಿಂದ ಹಾದುಹೋದಾಗ ಅವನು ಅವರನ್ನು ಗುರುತಿಸಿ ಅವರ ಮೇಲೆ ದಾಳಿ ಮಾಡಿ ಶಹೀದ್ ಮಾಡಿದನು. ನಂತರ ಅವರ ಮುಸಲ್ಲು ಕೂಡ ಮಾಡಿ ಹೇಳಿದನು, ಇವರು ಬದ್ರ್ ಯುದ್ಧದಲ್ಲಿ ಅಬು ಅಲಿಯನ್ನು ಕೊಂದವರಲ್ಲಿ ಒಬ್ಬರಾಗಿದ್ದರು, ಅಂದರೆ ನನ್ನ ತಂದೆ ಉಮಯ್ಯ ಬಿನ್ ಖಲಫ್‌ನನ್ನು ಕೊಂದವರು. ಈಗ ಮುಹಮ್ಮದ್(ಸ) ಅವರ ಅತ್ಯುತ್ತಮ ಸಹಬಿಗಳನ್ನು ಕೊಲ್ಲಲು ಮತ್ತು ನನ್ನ ಹೃದಯವನ್ನು ತಂಪಾಗಿಸಲು ಈಗ ನನಗೆ ಅವಕಾಶ ಲಭಿಸಿದೆ. ಅವನು ಹಝ್ರತ್ ಇಬ್ನ್ ಖೌಖಲ್(ರ), ಹಝ್ರತ್ ಖಾರಿಜಾ ಬಿನ್ ಝ್ಯೈದ್ ಮತ್ತು ಹಝ್ರತ್ ಔಸ್ ಬಿನ್ ಅರ್ಕವಮ್ ಅವರನ್ನು ಶಹೀದ್ ಮಾಡಿದನು. ಅವರ ಸೋದರ ಸಂಬಂಧಿಗಳಾದ ಹಝ್ರತ್ ಖಾರಿಜಾ(ರ) ಮತ್ತು ಹಝ್ರತ್ ಸಾಅದ್ ಬಿನ್ ರಬಿ(ರ) ಇಬ್ಬರನ್ನೂ ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು.

(ಅಲ್–ಇಸ್ತಿಯಾಬ್, ಸಂಪುಟ–2, ಪುಟಗಳು 3–4, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹೀಗೆ ವರದಿಯಾಗಿದೆ: ಉಹುದ್ ಯುದ್ಧದ ದಿನದಂದು ಹಝ಼್ರತ್ ಅಬ್ಬಾಸ್ ಬಿನ್ ಉಬಾದ(ರ) ಉಚ್ಚ ಸ್ವರದಲ್ಲಿ ಹೀಗೆ ಹೇಳುತ್ತಿದ್ದರು: ಎಲೈ ಮುಸ್ಲಿಮರ ಸಂಘವೇ, ಅಲ್ಲಾಹನು ಮತ್ತು ಅವನ ಪ್ರವಾದಿಯೊಂದಿಗೆ ಸೇರಿಕೊಂಡಿರಿ. ನಿಮಗೆ ಬಂದೆರಗಿರುವ ಈ ವಿಪತ್ತಿಗೆ ಕಾರಣ ನೀವು ನಿಮ್ಮ ಪ್ರವಾದಿಗೆ ತೋರಿಸಿದ ಅವಿಧೇಯತೆಯಾಗಿದೆ. ಅಲ್ಲಾಹನು ನಿಮಗೆ ಸಹಾಯದ ವಾಗ್ದಾನ ನೀಡುತ್ತಿದ್ದನು. ಆದರೆ ನೀವು ಸಹನೆದೋರಲಿಲ್ಲ. ಅನಂತರ ಹಝ಼್ರತ್ ಅಬ್ಬಾಸ್ ಬಿನ್ ಉಬಾದ(ರ) ತನ್ನ ತಲೆಕವಚ ಮತ್ತು ಯುದ್ಧವಸ್ತ್ರವನ್ನು ಕಳಚಿದರು ಮತ್ತು ಹಝ಼್ರತ್ ಖ಼ಾರಿಜ ಬಿನ್ ಝ್ಯೈದ್(ರ)ರೊಡನೆ ಕೇಳಿದರು: ನಿಮಗೆ ಇವುಗಳ ಅಗತ್ಯವಿದೆಯೇ? ಹಝ಼್ರತ್ ಖ಼ಾರಿಜ(ರ) ಹೇಳಿದರು: ಇಲ್ಲ, ಯಾವುದನ್ನು ನೀವು ಬಯಸುತ್ತಿದ್ದೀರೋ ಅದನ್ನೇ ನಾನೂ ಬಯಸುತ್ತಿದ್ದೇನೆ. ಎಂದರೆ ಶಹೀದ್ ಆಗುವುದು. ಅನಂತರ ಅವರೆಲ್ಲರೂ ಶತ್ರುಗಳನ್ನು ಎದುರಿಸಿದರು. ಅಬ್ಬಾಸ್ ಬಿನ್ ಉಬಾದ(ರ) ಹೇಳುತ್ತಿದ್ದರು: ನಮ್ಮ ಕಣ್ಣುಗಳ ಮುಂದೆ ರಸೂಲುಲ್ಲಾಹ್

ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಏನಾದರೂ ತೊಂದರೆ ಉಂಟಾದರೆ ನಾವು ನಮ್ಮ ಪ್ರಭುವಿನ ಸನ್ನಿಧಿಯಲ್ಲಿ ಏನು ಉತ್ತರ ಹೇಳುವುದು? ಹಝ್ರ‌ರತ್ ಖ಼ವಾರಿಜ(ರ) ಹೀಗೆ ಹೇಳುತ್ತಿದ್ದರು: ನಮ್ಮ ಪ್ರಭುವಿನ ಮುಂದೆ ನಮಗೆ ಹೇಳಲು ಯಾವುದೇ ಕಾರಣವೋ ನ್ಯಾಯವೋ ಇರದು. ಹಝ್ರ‌ರತ್ ಅಬ್ಬಾಸ್ ಬಿನ್ ಉಬಾದರನ್ನು(ರ) ಸುಫ್‌ಯಾನ್ ಬಿನ್ ಅಬ್ದುಶ್ಶಮ್ಸ್ ಶಹೀದ್ ಮಾಡಿದನು. ಖ಼ವಾರಿಜ ಬಿನ್ ಝ್ಯೆದ್(ರ)ರಿಗೆ ಬಾಣಗಳ ಕಾರಣದಿಂದ ದೇಹದಲ್ಲಿ ಹತ್ತಕ್ಕಿಂತ ಹೆಚ್ಚು ಗಾಯಗಳಾಗಿದ್ದುವು.

(ಕಿತಾಬುಲ್ ಮಘಾಝಿ, ಸಂಪುಟ–1, ಪುಟಗಳು 227–228, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ನಂತರ ಇನ್ನೊಂದು ವರದಿ ಇದೆ: ಉಹುದ್ ಯುದ್ಧದ ದಿನದಂದು ಹಝ್ರತ್ ಮಾಲಿಕ್ ಬಿನ್ ದುಖ್ಶುಮ್(ರ) ಅವರು ಹಝ್ರತ್ ಖಾರಿಜಾ ಬಿನ್ ಝ್ಯೆದ್(ರ) ಅವರ ಬಳಿಯಿಂದ ಹಾದುಹೋದರು. ಹಝ್ರತ್ ಖಾರಿಜಾ(ರ) ತಮ್ಮ ಗಾಯಗಳ ಕಾರಣದಿಂದ ಕೆಳಗೆ ಕುಳಿತಿದ್ದರು. ಅವರು ಸುಮಾರು ಹದಿಮೂರು ಮಾರಣಾಂತಿಕ ಗಾಯಗಳನ್ನು ಹೊಂದಿದ್ದರು. ಹಝ್ರತ್ ಮಾಲಿಕ್(ರ) ಅವರಿಗೆ ಹೇಳಿದರು, ಹಝ್ರತ್ ಪೈಗಂಬರ್(ಸ) ಅವರು ಶಹೀದ್ ಆಗಿದ್ದಾರೆಂದು ನಿಮಗೆ ತಿಳಿದಿಲ್ಲವೇ. ಅವಿಶ್ವಾಸಿಗಳ ಮರು ಆಕ್ರಮಣದ ನಂತರ ಇದನ್ನು ಉಲ್ಲೇಖಿಸಲಾಗಿದೆ. ಅದಕ್ಕೆ ಹಝ್ರತ್ ಖಾರಿಜಾ(ರ) ಹೇಳಿದರೆ ಒಂದು ವೇಳೆ ಹಝ್ರತ್ ಪೈಗಂಬರ್(ಸ) ಹುತಾತ್ಮರಾಗಿದ್ದರೆ ಖಂಡಿತವಾಗಿಯೂ ಅಲ್ಲಾಹ್ ಜೀವಂತವಾಗಿದ್ದಾನೆ ಮತ್ತು ಅವನು ಎಂದಿಗೂ ಸಾಯುವುದಿಲ್ಲ. ಇದು ಈ ಜನರ ನಂಬಿಕೆಯಾಗಿತ್ತು. ನೀವು ನಿಮ್ಮ ಧರ್ಮಕ್ಕಾಗಿ ಹೋರಾಡಿ ಎಂಬ ಸಂದೇಶವನ್ನು ಮುಹಮ್ಮದ್(ಸ.ಅ)ರು ಸಾರಿದ್ದಾರೆ. (ಕಿತಾಬುಲ್ ಮಘ಼ಾಝಿ, ಸಂಪುಟ–1, ಪುಟ–243, ದಾರುಲ್ ಕುತುಬ್ ಇಲ್‌ಮಿಯ ಬೈರುತ್) ಆದರೆ ಈಗ ಶತ್ರು ನಿಮ್ಮಿಂದ ಹೋರಾಡಿದರೆ ನೀವು ಅವನ ವಿರುದ್ಧ ಹೋರಾಡಿ. ಅಲ್ಲಾಹನಿಗಾಗಿ ನಮ್ಮ ಪ್ರಾಣವನ್ನು ತ್ಯಾಗ ಮಾಡುವುದು ನಮ್ಮ ಕೆಲಸವಾಗಿದೆ.

ನಂತರ ಹಝ್ರ‌ರತ್ ಶಮ್ಮಾಸ್ ಬಿನ್ ಉಸ್ಮಾನ್‌ರ(ರ) ಶಹಾದತಿನ ಪ್ರಸ್ತಾಪವಿದೆ. ಅವರು ಬದ್ರ್ ಯುದ್ಧ ಮತ್ತು ಉಹುದ್ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಅವರು ಉಹುದ್ ಯುದ್ಧದಲ್ಲಿ ಬಹಳ ಧೀರತೆಯಿಂದ ಹೋರಾಡುತ್ತಾ 34ನೇ ವಯಸ್ಸಿನಲ್ಲಿ ಶಹೀದ್ ಆದರು. ಹಝ್ರ‌ರತ್ ಪೈಗಂಬರ್(ಸ) ಹೀಗೆ ಹೇಳಿದರು: ಶಮ್ಮಾಸ್ ಬಿನ್ ಉಸ್ಮಾನ್‌ರನ್ನು ನಾನು ಗುರಾಣಿಯಂತೆ ಕಂಡೆನು. ಹಝ್ರತ್ ಪೈಗಂಬರ್(ಸ) ರವರು ಪ್ರಜ್ಞಹೀನರಾಗುವರೆಗೆ ಬಲಕ್ಕೆ ಅಥವಾ ಎಡಕ್ಕೆ ಎಲ್ಲಿ ನೋಡಿದರೂ ಶಮ್ಮಾಸ್ ಅವರನ್ನು ಪಡೆಯುತ್ತಿದ್ದರು, ಅವರು ಉಹದ್ ಯುದ್ಧದಲ್ಲಿ ತಮ್ಮ ಕತ್ತಿಗಳಿಂದ ರಕ್ಷಿಸುತ್ತಿರುವುದಾಗಿ ಕಂಡರು. ಹಝ್ರತ್ ಪೈಗಂಬರ್(ಸ) ಅವರ ಮೇಲೆ ದಾಳಿಯಾದಾಗ ಮತ್ತು ಅವರಿಗೆ ಕಲ್ಲುಗಳು ಬರಲಾರಂಭಿಸಿದಾಗ. ಹಝ್ರತ್ ಶಮ್ಮಾಸ್(ರ) ಅವರು ತಮ್ಮನ್ನು ತಾವು ಹಝ್ರತ್ ಪೈಗಂಬರ್(ಸ) ಅವರ ಮುಂದೆ ಗುರಾಣಿಯಂತೆ ನಿಂತುಕೊಂಡರು. ಹೀಗೆ ಅವರು(ರ) ಗಂಭೀರವಾಗಿ ಗಾಯಗೊಂಡರು. ತದನಂತರ ಹಝ್ರತ್ ಶಮ್ಮಾಸ್(ರ) ಅವರಲ್ಲಿ ಸ್ವಲ್ಪ ಜೀವವಿತ್ತು ಅವರಿಗೆ ಮದೀನಾಗೆ ಕೊಂಡೊಯ್ಯುದರು. ಅವರನ್ನು ಹಝ್ರತ್ ಆಯಿಷಾ(ರ) ಅವರ ಬಳಿಗೆ ಕರೆದೊಯ್ಯಲಾಯಿತು. ಅದಕ್ಕೆ ಹಝ್ರತ್ ಉಮ್ಮ್ ಸಲ್ಮಾ ಹೇಳಿದರು: ನನ್ನ ಸೋದರಸಂಬಂಧಿಯನ್ನು ನನ್ನನ್ನು ಹೊರತುಪಡಿಸಿ ಬೇರೆಯವರ ಬಳಿಗೆ ಕರೆದೊಯ್ಯಲಾಗುತ್ತದೆಯೇ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, ಅವರನ್ನು ಹಝ್ರತ್ ಉಮ್ಮೆ ಸಲಾಮಾ(ರ) ಅವರ ಬಳಿಗೆ ಕರೆದೊಯ್ಯಿರಿ. ಆದ್ದರಿಂದ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರ ಮನೆಯಲ್ಲಿಯೇ ಅವರು ನಿಧನ ಹೊಂದಿದರು. ಅವರು ಉಹುದ್‌ನಿಂದ ಗಾಯಗೊಂಡು ಇಲ್ಲಿಗೆ ಬಂದಿದ್ದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಅವರ ಆದೇಶದ ಮೇರೆಗೆ ಹಝ್ರತ್ ಶಮ್ಮಾಸ್(ರ) ಅವರಿಗೆ ಉಹುದ್ ಸ್ಥಳಕ್ಕೆ ಕರೆದೊಯ್ಯಲಾಯಿತು ಮತ್ತು ಅದೇ ಬಟ್ಟೆಯಲ್ಲಿ ದಫನ್ ಮಾಡಲಾಯಿತು. ಎರಡು ದಿನಗಳ ನಂತರ, ಅವರು ಮದೀನಾದಲ್ಲಿ ನಿಧನರಾದರು, ಆದರೆ ಅವರನ್ನು ಉಹಾದ್‌ನಲ್ಲಿ ದಫನ್ ಮಾಡಲಾಯಿತು. ಯುದ್ಧದ ನಂತರ, ಗಾಯಗೊಂಡ ಸ್ಥಿತಿಯಲ್ಲಿ ಅವರನ್ನು ಮದೀನಾಕ್ಕೆ ಕರೆದೊಯ್ಯಿದಾಗ, ಅವರು ಅಲ್ಲಿ ಒಂದು ಹಗಲು ರಾತ್ರಿ ಜೀವಂತವಾಗಿದ್ದರು ಮತ್ತು ಆ ಸಮಯದಲ್ಲಿ ಅವರು ಏನನ್ನೂ ತಿನ್ನಲಿಲ್ಲ ಮತ್ತು ಕುಡಿಯಲಿಲ್ಲ ಎಂದು ಹೇಳಲಾಗುತ್ತದೆ. ತೀವ್ರ ದೌರ್ಬಲ್ಯದ ಸ್ಥಿತಿ ಇತ್ತು, ಬದಲಿಗೆ ಮೂರ್ಛೆ ಹೋಗುವ ಸ್ಥಿತಿ ಇತ್ತು. ಹಝ್ರತ್ ಶಮ್ಮಾಸ್(ರ) ಮೂವತ್ನಾಲ್ಕು ವರ್ಷ ವಯಸ್ಸಿನಲ್ಲಿ ನಿಧನರಾದರು. ಅವರು ಯೌವನ ಪ್ರಾಯದಲ್ಲಿದ್ದರು.

ಹಝ್ರ‌ರತ್ ಶಮ್ಮಾಸ್ ಬಿನ್ ಉಸ್ಮಾನ್‌ರ(ರ) ಕುರಿತು ಚರಿತ್ರೆಯಲ್ಲಿ ಎಂತಹ ಘಟನೆಯ ಉಲ್ಲೇಖವಿದೆ ಎಂದರೆ ಅದು ಅವರಿಗೆ ಹಝ್ರ‌ರತ್ ಪೈಗಂಬರ್(ಸ)ರೊಂದಿಗೆ ಇರುವ ಪ್ರೀತಿಗೆ ಒಂದು ಮಾದರಿಯಾಗಿದೆ ಮತ್ತು ಇಸ್ಲಾಮಿಗಾಗಿ ತ್ಯಾಗದ ಅತ್ಯುನ್ನತ ಮಟ್ಟವನ್ನು ನೆಲೆನಿಲ್ಲಿಸುವುದಕ್ಕೂ ಒಂದು ಮಾದರಿಯಾಗಿದೆ. ಯಾವ ರೀತಿಯಲ್ಲಿ ಹಝ್ರ‌ರತ್ ತಲ್‌ಹ(ರ) ಉಹುದ್ ಯುದ್ಧದಲ್ಲಿ ತನ್ನ ಕೈಯನ್ನು ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಮುಖದ ಮುಂದೆ ಇರಿಸಿ ಯಾವುದೇ ಬಾಣ ಪ್ರವಾದಿಗೆ ತಗುಲದಂತೆ ನೋಡಿದ ಪ್ರೀತಿ ಮತ್ತು ಪ್ರೇಮದ ಕಥೆಯ ಪ್ರಸ್ತಾಪ ಬರುತ್ತದೋ ಅದೇ ರೀತಿಯಲ್ಲಿ ಹಝ್ರ‌ರತ್ ಶಮ್ಮಾಸ್(ರ) ಸಹ ಬಹಳ ಮಹತ್ತಾದ ಪಾತ್ರವನ್ನು ವಹಿಸಿದರು. ಹಝ್ರ‌ರತ್ ಶಮ್ಮಾಸ್ ಹಝ್ರ‌ರತ್ ಪೈಗಂಬರ್(ಸ)ರ ಮುಂದೆ ನಿಂತರು ಮತ್ತು ಪ್ರತಿಯೊಂದು ಹಲ್ಲೆಯನ್ನು ತನ್ನ ದೇಹದಿಂದ ತಡೆದರು. ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಶಮ್ಮಾಸ್(ರ) ಅವರ ಬಗ್ಗೆ ಹೇಳಿದರು ನಾನು ಶಮ್ಮಾಸ್ ಅವರಿಗೆ ಯಾವುದನ್ನಾದರೂ ಹೋಲಿಸಿದರೆ, ನಾನು ಅವರನ್ನು ಗುರಾಣಿಗೆ ಹೋಲಿಸುತ್ತೇನೆ, ಅವರು ಉಹದ್ ಯುದ್ಧಭೂಮಿಯಲ್ಲಿ ನನಗೆ ಗುರಾಣಿಯಾದರು. ಅವರು ಕೊನೆಯವರೆಗೂ ಹೋರಾಡಿದರು, ಬಲ ಮತ್ತು ಎಡಕ್ಕೆ ನನ್ನನ್ನು ಕಾವಲು ಕಾಯುತ್ತಿದ್ದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಶಮ್ಮಾಸ್‌ರನ್ನು ನೋಡಿದಾಗಲೆಲ್ಲಾ, ನಾನು ಅವರಿಗೆ(ರ) ತುಂಬಾ ಧೈರ್ಯದಿಂದ ಹೋರಾಡುವುದನ್ನು ನೋಡುತ್ತಿದ್ದೆ. ಶತ್ರುಗಳು ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ಮಾಡಲು ಯಶಸ್ವಿಯಾದಾಗ ಮತ್ತು ಅವರು ಮೂರ್ಛೆ ಹೋದಾಗ. ಅವರು ಬಿದ್ದಾಗಲೂ, ಶಮ್ಮಾಸ್(ರ) ಸ್ವತಃ ಗಂಭೀರವಾಗಿ ಗಾಯಗೊಂಡು ಗುರಾಣಿಯಾಗಿ ಹಝ್ರತ್ ಪೈಗಂಬರ್(ಸ) ಅವರ ಮುಂದೆ ನಿಂತರು. ಈ ಸ್ಥಿತಿಯಲ್ಲಿ ಅವರನ್ನು ಮದೀನಾಗೆ ಕರೆತರಲಾಯಿತು. ಹಝ್ರತ್ ಉಮ್ ಸಲ್ಮಾ(ರ) ಹೇಳಿದರು: ಇವರು ನನ್ನ ಚಿಕ್ಕಪ್ಪನ ಮಗ ಆಗಿದ್ದಾರೆ. ನಾನು ಅವರಿಗೆ ಹತ್ತಿರ ಸಂಬಂಧಿಯಾಗಿದ್ದೇನೆ. ಹಾಗಾಗಿ ಆತನನ್ನು ನನ್ನ ಮನೆಯಲ್ಲೇ ಚಿಕಿತ್ಸೆ ಕೊಡಿಸಬೇಕು, ಆದರೆ ಗಾಯಗಳ ತೀವ್ರತೆಯಿಂದ ಒಂದೂವರೆ ದಿನದ ನಂತರ ಅವರು ಮರಣ ಹೊಂದಿದರು. ಹಝ್ರತ್ ಪೈಗಂಬರ್(ಸ)ರವರು ಹೇಳಿದರು: ಹಝ್ರತ್ ಶಮ್ಮಾಸ್(ರ) ರವರಿಗೆ ಉಳಿದ ಶಹೀದರಹಾಗೆ ಅವರ ಬಟ್ಟೆಯಲ್ಲಿಯೇ ದಫನ್ ಮಾಡಬೇಕು ಎಂದು ಆದೇಶಿಸಿದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–186, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರ‌ರತ್ ನುಅ್‌ಮಾನ್ ಬಿನ್ ಮಾಲಿಕ್(ರ)ರ ಶಹಾದತಿನ ಪ್ರಸ್ತಾಪವಿದೆ. ಅವರು ಸಹ ಬದ್ರ್ ಮತ್ತು ಉಹುದ್ ಯುದ್ಧಗಳಲ್ಲಿ ಪಾಲ್ಗೊಂಡಿದ್ದರು ಹಾಗೂ ಉಹುದ್ ಯುದ್ಧದಲ್ಲಿ ಶಹೀದ್ ಆದರು. ಒಂದು ವರದಿಯ ಪ್ರಕಾರ ಅವರನ್ನು ಸಫ್‌ವಾನ್ ಬಿನ್ ಉಮಯ್ಯ ಮತ್ತು ಮತ್ತೊಂದು ವರದಿಯ ಪ್ರಕಾರ ಅವರನ್ನು ಅಬಾನ್ ಬಿನ್ ಸಈದ್ ಶಹೀದ್ ಮಾಡಿದ್ದರು ಎಂದಿದೆ. ಹಝ್ರತ್ ನುಅ್‌ಮಾನ್ ಬಿನ್ ಮಾಲಿಕ್(ರ), ಹಝ್ರತ್ ಮುಜಝ್ಝರ್ ಬಿನ್ ಝಿಯಾದ್(ರ) ಮತ್ತು ಹಝ್ರತ್ ಉಬಾದಾ ಬಿನ್ ಹಸ್‌ಹಾಸ್(ರ) ಅವರನ್ನು ಉಹುದ್ ಯುದ್ಧದ ಸಂದರ್ಭದಲ್ಲಿ ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು. (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–414, ದಾರುಲ್ ಕುತುಬ್ ಅಲ್‌ಇಲ್ಮೀಯಾ ಬೈರುತ್) (ಅಸದುಲ್ ಗ಼ಾಬ, ಸಂಪುಟ–3, ಪುಟ–157, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಇಬ್ನೆ ಹಿಶ್ಶಾಮ್, ಪುಟ–468, 560, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಉಮ್ದತುಲ್ ಖಾರಿ, ಸಂಪುಟ–14, ಪುಟ–183, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರುತ್)

ಹಝ್ರತ್ ನುಅ್‌ಮಾನ್ ಬಿನ್ ಮಾಲಿಕ್(ರ) ರವರು ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧಕ್ಕಾಗಿ ಹೊರಟಾಗ ಮತ್ತು ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಅವರೊಂದಿಗೆ ಸಮಾಲೋಚಿಸಿದಾಗ ಅವರು ಹೇಳಿದರು, ಯಾ ರಸೂಲಲ್ಲಾಹ್(ಸ)! ಅಲ್ಲಾಹನ ಆಣೆ, ನಾನು ಖಂಡಿತವಾಗಿಯೂ ಸ್ವರ್ಗವನ್ನು ಪ್ರವೇಶಿಸುತ್ತೇನೆ. ಬಹಳ ಶೀಘಿಯಿಂದ ಹೇಳುತ್ತಿದ್ದಾರೆ. ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳುತ್ತಾರೆ ನಾನು ಖಂಡಿತವಾಗಿಯೂ ಸ್ವರ್ಗವನ್ನು ಪ್ರವೇಶಿಸುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಕೇಳಿದರು ಅದು ಹೇಗೆ? ಹಝ್ರತ್ ನು'ಮಾನ್(ರ) ಹೇಳಿದರು, "ಅಲ್ಲಾಹನ ಹೊರತು ಬೇರೆ ದೇವರು ಇಲ್ಲ ಮತ್ತು ನೀವು(ಸ) ಅಲ್ಲಾಹನ ಸಂದೇಶವಾಹಕರಾಗಿದ್ದೀರಿ ಮತ್ತು ನಾನು ಎಂದಿಗೂ ಯುದ್ಧದಿಂದ ಓಡಿಹೋಗುವುದಿಲ್ಲ ಎಂದು ಸಾಕ್ಷಿ ಹೇಳುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಸತ್ಯವನ್ನು ಹೇಳಿದ್ದೀರಿ. ಹೀಗೆ ಅವರು ಅದೇ ದಿನ ಹುತಾತ್ಮರಾದರು. (ಅಸದುಲ್ ಗ಼ಾಬ, ಸಂಪುಟ–5, ಪುಟ–322, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಖಾಲಿದ್ ಬಿನ್ ಅಬು ಮಾಲಿಕ್ ಜಾಅ್‌ದಿ ವರದಿ ಮಾಡುತ್ತಾರೆ:

ನಾನು ನನ್ನ ತಂದೆಯ ಪುಸ್ತಕದಲ್ಲಿ ಈ ವರದಿಯನ್ನು ಕಂಡುಕೊಂಡಿದ್ದೇನೆ: ಹಝ್ರತ್ ನುಅ್ಮಾನ್ ಬಿನ್ ಖೌಖಲ್ ಅನ್ಸಾರಿ(ರ) ಅವರು ಹೀಗೆ ದುಆ ಮಾಡಿದ್ದರು, ಓ ನನ್ನ ಪ್ರಭು ನಾನು ನಿನಗೆ ಪ್ರಮಾಣ ಮಾಡಿ ಹೇಳುತ್ತೇನೆ, ಸೂರ್ಯ ಮುಳುಗುವುದಕ್ಕು ಮುಂಚೆ ನಾನು ನನ್ನ ಕುಂಟ ಸ್ಥಿತಿಯಲ್ಲಿಯೇ ಸ್ವರ್ಗದ ಹಸಿರಿನಲ್ಲಿ ನಡೆದಾಡುತ್ತೇನೆ. ಹೀಗೆ ಅವರು ಅದೇ ದಿನ ಹುತಾತ್ಮರಾದರು. ರಸೂಲುಲ್ಲಾಹ್(ಸ) ಹೇಳಿದರು, ಅಲ್ಲಾಹನು ಅವನ ಪ್ರಾರ್ಥನೆಯನ್ನು ಸ್ವೀಕರಿಸಿದನು ಏಕೆಂದರೆ ನಾನು ಅವನನ್ನು ನೋಡಿದನು, ಅವರು(ಸ) ಒಂದು ದರ್ಶನವನ್ನು ನೋಡಿದರು ಮತ್ತು ಇದನ್ನು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದನು. ಅವರು(ಸ) ಹೇಳಿದರು: ಅವರು(ರ) ಸ್ವರ್ಗದಲ್ಲಿ ನಡೆಯುತ್ತಿರುವುದನ್ನು ನಾನು ನೋಡಿದೆ ಮತ್ತು ಅವರಿಗೆ ಯಾವುದೇ ರೀತಿಯ ಕುಂಟತನ ಅಥವಾ ತತ್ತರಿಸುವಿಕೆ ಇರಲಿಲ್ಲ.
(ಮಾರಿಫತಿಸ್ಸಹಾಬ, ಸಂಪುಟ–4, ಪುಟ–317, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ನಂತರ ಹಝ್ರತ್ ಸಾಬಿತ್ ಬಿನ್ ದಹ್‌ದಾಹ್(ರ) ಅವರ ಉಲ್ಲೇಖವಿದೆ. ಸಾಬಿತ್ ಬಿನ್ ದಹ್‌ದಾಹ್(ರ) ಉಹುದ್ ಯುದ್ಧದಲ್ಲಿ ಪ್ರಮುಖವಾಗಿ ಭಾಗವಹಿಸಿದ್ದರು. (ಸೈರುಸ್ಸಹಾಬ, ಸಂಪುಟ–3, ಪುಟ–552, ದಾರುಲ್ ಇಶಾಅತ್ ಕರಾಚಿ) ಅವರು ಪ್ರಮುಖ ಪಾತ್ರವನ್ನು ಹೊಂದಿದ್ದಾರೆ. ಹಝ್ರತ್ ಪೈಗಂಬರ್(ಸ) ಹುತಾತ್ಮರಾದ ಸುದ್ದಿಯ ನಂತರ, ಕೆಲವು ಮುಸ್ಲಿಮರು ಹೇಳಿದರು, ಈಗ ಹಝ್ರತ್ ಪೈಗಂಬರ್(ಸ)ರು ಹುತಾತ್ಮರಾಗಿದ್ದಾರೆ, ನೀವು ನಿಮ್ಮ ಜನರ ಬಳಿಗೆ ಹಿಂತಿರುಗಿ ಅವರು ನಿಮಗೆ ಆಶ್ರಯವನ್ನು ನೀಡುತ್ತಾರೆ. ಅದ್ಕಕೆ ಕೆಲವರು ಹೇಳಿದರು, "ಅಲ್ಲಾಹನ ಸಂದೇಶವಾಹಕರು ಹುತಾತ್ಮರಾಗಿದ್ದರೆ, ನೀವು ನಿಮ್ಮ ಪ್ರಭುವಿನ ಮುಂದೆ ಹುತಾತ್ಮರಾಗಿ ಹಾಜರಾಗುವ ತನಕ ನಿಮ್ಮ ಪ್ರವಾದಿಯವರ ಧರ್ಮಕ್ಕಾಗಿ ಮತ್ತು ಅದರ ಸಂದೇಶವನ್ನು ಸಾರುವುದಕ್ಕಾಗಿ ನೀವು ಹೋರಾಡುವುದಿಲ್ಲವೇ?

ಹಝ್ರತ್ ಸಾಬಿತ್ ಬಿನ್ ದಹದಾಹ್(ರ) ಅನ್ಸಾರ್‌ಗಳಿಗೆ ಹೇಳಿದರು. ಓ ಅನ್ಸಾರರ ಗುಂಪು! ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಶಹೀದ್ ಆಗಿದ್ದರೆ ಸರ್ವಶಕ್ತನಾದ ಅಲ್ಲಾಹನು ಜೀವಂತವಾಗಿದ್ದಾನೆ ಮತ್ತು ಸಾಯಲು ಸಾಧ್ಯವಿಲ್ಲ. ನಿಮ್ಮ ಧರ್ಮಕ್ಕಾಗಿ ಹೋರಾಡಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ವಿಜಯ ಮತ್ತು ಯಶಸ್ಸನ್ನು ನೀಡುತ್ತಾನೆ. ಇದನ್ನು ಕೇಳಿದ ಅನ್ಸಾರಿ ಮುಸಲ್ಮಾನರ ಗುಂಪು ಎದ್ದುನಿಂತು ಹಝ್ರತ್ ಸಾಬಿತ್(ರ) ಜೊತೆಗೂಡಿ ಖಾಲಿದ್ ಬಿನ್ ವಲೀದ್, ಇಕ್ರಿಮಾ ಬಿನ್ ಅಬು ಜಹ್ಲ್, ಅಮ್ರ್ ಬಿನ್ ಆಸ್ ಮತ್ತು ಝಿರಾರ್ ಬಿನ್ ಖತ್ತಾಬ್ ಒಳಗೊಂಡ ಮುಶ್ರಿಕೀನರ ಗುಂಪಿನ ಮೇಲೆ ದಾಳಿ ಮಾಡಿದರು. ಮುಸಲ್ಮಾನರ ಈ ಸಣ್ಣ ಗುಂಪು ದಾಳಿ ಮಾಡುವುದನ್ನು ನೋಡಿದ ಖಾಲಿದ್ ಬಿನ್ ವಲೀದ್ ಅವರ ಮೇಲೆ ಉಗ್ರವಾಗಿ ದಾಳಿ ಮಾಡಿ ಸಾಬಿತ್ ಬಿನ್ ದಹದಾಹ್(ರ) ಮತ್ತು ಅವರ ಅನ್ಸಾರಿ ಸಹಚರರನ್ನು ವಧಿಸಿದರು.
(ಅಸ್ಸೀರತುಲ್ ಹಲಬೀಯಾ, ಸಂಪುಟ–2, ಪುಟ–309, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಮತ್ತೊಂದು ಹದೀಸ್‌ನಲ್ಲಿ ಅಬ್ದುಲ್ಲಾ ಬಿನ್ ಉಮರ್ ಖತ್ಮಿ ಹೇಳುತ್ತಾರೆ: ಸಾಬಿತ್ ಬಿನ್ ದಹದಾಹ್(ರ) ಉಹುದ್ ದಿನದಂದು ಮುಂದೆ ಬಂದರು ಮತ್ತು ಆ ಸಮಯದಲ್ಲಿ ಮುಸ್ಲಿಮರು ಚದುರಿಹೋಗಿದ್ದರು ಮತ್ತು ತೊಂದರೆಗೀಡಾದರು. ಅವರು ದೊಡ್ಡ ಧ್ವನಿಯಲ್ಲಿ ಹೀಗೆ ಕರೆಯಲು ಪ್ರಾರಂಭಿಸಿದರು, ಓ ಅನ್ಸಾರ್ ಗುಂಪು! ನನ್ನ ಬಳಿ ಬನ್ನಿ ನಾನು ಸಾಬಿತ್ ಬಿನ್ ದಹ್‌ದಾಹ್, ಮುಹಮ್ಮದ್(ಸ) ನಿಜವಾಗಿಯೂ ವಧಿಸಲ್ಪಟ್ಟಿದ್ದರೆ, ಅಲ್ಲಾಹನು ಜೀವಂತವಾಗಿದ್ದಾನೆ ಅವನು ಎಂದಿಗೂ ಸಾಯುವುದಿಲ್ಲ. ಆದ್ದರಿಂದ ನಿಮ್ಮ ಧರ್ಮದ ಪರವಾಗಿ ಹೋರಾಡಿ, ಅಲ್ಲಾಹನು ನಿಮ್ಮನ್ನು ಜಯಿಸುತ್ತಾನೆ ಮತ್ತು ನಿಮಗೆ ಸಹಾಯ ಮಾಡುತ್ತಾನೆ.

ಹಾಗಾಗಿ ಅನ್ಸಾರರ ಗುಂಪು ಅವರ ಬಳಿಗೆ ಸೇರಿತು. ಅವರು ಅನ್ಸಾರಿ ಮತ್ತು ಮುಸ್ಲಿಮರನ್ನು ತಮ್ಮೊಂದಿಗೆ ಕರೆದೊಯ್ದು ಅವಿಶ್ವಾಸಿಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದರು. ಅವರ ವಿರುದ್ಧ ಅವಿಶ್ವಾಸಿಗಳ ಬಲವಾದ ಸೈನ್ಯವು ಬಂದಿತು, ಅವರ ಮುಖ್ಯಸ್ಥರು ಖಾಲಿದ್ ಬಿನ್ ವಲೀದ್, ಅಮ್ರ್ ಬಿನ್ ಆಸ್, ಇಕ್ರಮಾ ಬಿನ್ ಅಬು ಜಹ್ಲ್ ಮತ್ತು ಝುರ್ರಾರ್ ಬಿನ್ ಖತ್ತಾಬ್ ಆಗಿದ್ದರು. ಇವರೆಲ್ಲ ಸೇರಿ ಆತನ ಮೇಲೆ ದಾಳಿ ಮಾಡಲು ಆರಂಭಿಸಿದರು. ಸಾಬಿತ್‌ನ ಮೇಲೆ ಖಾಲಿದ್ ಬಿನ್ ವಲೀದ್ ಈಟಿಯಿಂದ ದಾಳಿ ಮಾಡಿದನು ಮತ್ತು ಈಟಿ ಅವರನ್ನು ದಾಟಿತು. ಸಾಬಿತ್ ಹುತಾತ್ಮರಾಗಿ ಬಿದ್ದು ಅವರೊಂದಿಗಿದ್ದ ಅನ್ಸಾರರೂ ಹುತಾತ್ಮರಾದರು. ಈ ಕಾರಣಕ್ಕಾಗಿ, ಈ ದಿನ ಎಲ್ಲಾ ಮುಸ್ಲಿಮರ ಅಂತ್ಯದಲ್ಲಿ ಈ ಜನರು ಹುತಾತ್ಮರಾದರು ಎಂದು ಹೇಳಲಾಗುತ್ತದೆ.

ಒಂದು ವರದಿ ಹೀಗಿದೆ: ಖಾಲಿದ್ ಮುಂದೆ ಸಾಗಿ ಈಟಿ ಎಸೆದರು, ಅದರಿಂದ ಹಝ್ರತ್ ಸಾಬಿತ್ ಗಾಯಗೊಂಡು ನೆಲದ ಮೇಲೆ ಬಿದ್ದರು. ಜನರು ಅವರಿಗೆ ಎತ್ತಿಕೊಂಡು ಚಿಕಿತ್ಸೆ ಆರಂಭಿಸಿದರು. ಆ ವೇಳೆಗೆ ರಕ್ತಸ್ರಾವ ನಿಂತು ಕ್ಷೇಮವಾಯಿತು, ಆದರೆ ಹುದೈಬಿಯಾ ಯುದ್ಧದ ನಂತರ ಗಾಯವು ಮತ್ತೊಮ್ಮೆ ಚಿಗುರಿತು ಅದರ ಕಾರಣದಿಂದ ಅವರು ಮೃತರಾದರು. ಆದಾಗ್ಯೂ, ಇದು ಕೂಡ ಒಂದು ವರದಿಯಾಗಿದೆ. ಹಝ್ರತ್ ಜಾಬಿರ್ ಬಿನ್ ಸಮ್ರಾಹ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಸಾಬಿತ್ ಬಿನ್ ದಹದಾಹ್(ರ) ರವರ ಜನಾಝುದೊಂದಿಗೆ ಕಾಲ್ನಡಿಗೆಯಲ್ಲಿ ತೆರಳಿದರು ಮತ್ತು ಕುದುರೆಯ ಮೇಲೆ ಕುಳಿತು ಹಿಂದಿರುಗಿದರು. (ಅಸದುಲ್ ಗ್ಹಾಬ, ಸಂಪುಟ–1, ಪುಟ–440, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೈರುಸ್ಸಹಾಬ, ಸಂಪುಟ–3, ಪುಟ–552, ದಾರುಲ್ ಇಶಾಅತ್ ಕರಾಚಿ) (ತಿರ್ಮಿಧಿ ಅಬ್ವಾಬುಲ್ ಜನಾಎಝ್, ಹದೀಸ್–1014)

ಈ ವರದಿಯಿಂದ ತಿಳಿದು ಬರುವುದೇನೆಂದರೆ ಹುದೈಬಿಯಾ ಯುದ್ಧದ ನಂತರ ಗಾಯಗಳು ಸಿಡಿಯುವುದರಿಂದ ಮೃತರಾದರು ಎಂಬ ವರದಿಯು ದುರ್ಬಲ ವರದಿಯಾಗಿದೆ. ಇದೇ ಸಂದರ್ಭದಲ್ಲಿ ಹುತಾತ್ಮರಾದರು.

ಒಂದು ಕುಟುಂಬದ ನಾಲ್ವರು ಸದಸ್ಯರ ಶಹಾದತಿನ ಪ್ರಸ್ತಾಪ ಸಹ ಇದೆ. ಆ ಶಹೀದರಲ್ಲಿ ಸಾಬಿತ್ ಬಿನ್ ವಖಶ್(ರ) ಮತ್ತು ಅವರ ಸಹೋದರ ರಿಫಾಅ ಬಿನ್ ವಖಶ್(ರ), ಅದೇ ರೀತಿಯಲ್ಲಿ ಸಾಬಿತ್‌ರ ಇಬ್ಬರು ಪುತ್ರರಾದ ಸಲ್ಮಾ ಬಿನ್ ಸಾಬಿತ್(ರ) ಮತ್ತು ಅಮ್ರ್ ಬಿನ್ ಸಾಬಿತ್(ರ) ಸೇರುತ್ತಾರೆ. ಇವರೆಲ್ಲರ ಸಂಬಂಧ ಅನ್ಸಾರರ ಗೋತ್ರ ಬನೂ ಅಬ್ದುಲ್ ಅಶ್‌ಹಲ್‌ನೊಂದಿಗೆ ಆಗಿತ್ತು. (ಅಸದುಲ್ ಗ್ಹಾಬ, ಸಂಪುಟ–1, ಪುಟ–458–459, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ರಿಫಾಅ ಬಿನ್ ವಖಶ್(ರ) ವೃದ್ಧ ವ್ಯಕ್ತಿಯಾಗಿದ್ದರು. ಅವರನ್ನು ಖ್ವಾಲಿದ್ ಬಿನ್ ವಲೀದ್(ರ) ಶಹೀದ್ ಮಾಡಿದ್ದರು.
(ಅಸದುಲ್ ಗ್ಹಾಬ, ಸಂಪುಟ–2, ಪುಟ–288, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಸಾಬಿತ್ ಬಿನ್ ವಕ್ಶ್(ರ) ಅವರ ಹುತಾತ್ಮತೆಯ ಘಟನೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಇಬ್ನ್ ಇಸ್‌ಹಾಕ್ ಬರೆದಿದ್ದಾರೆ, ಹಝ್ರತ್ ಪೈಗಂಬರ್(ಸ) ಅವರು ಉಹದ್ ಯುದ್ಧಕ್ಕೆ ಹೋದಾಗ, ಸಾಬಿತ್ ಬಿನ್ ವಕ್ಶ್(ರ) ಮತ್ತು ಹುಸೈಲ್ ಬಿನ್ ಜಾಬಿರ್(ರ), ಅವರ ಹೆಸರು ಯಮನ್ ಎಂದಾಗಿತ್ತು ಮತ್ತು ಇವರು ಹುದೈಫಾ ಬಿನ್ ಯಮಾನ್ ಅವರ ತಂದೆಯಾಗಿದ್ದರು ಅವರಿಬ್ಬರು ವಯಸ್ಸಾದವರಾಗಿದ್ದರು ಮತ್ತು ಅವರಿಬ್ಬರು ಮುಸ್ಲಿಮರ ಮಹಿಳೆಯರು ಹಾಗೂ ಮಕ್ಕಳು ಸುರಕ್ಷಿತೆಗಾಗಿ ಆಶ್ರಯ ಪಡೆದಿದ್ದ ಕೋಟೆಯಲ್ಲಿ ಇದ್ದರು. ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ಹೇಳಿದರು, ನೀವು ಏನು ಕಾಯುತ್ತಿದ್ದೀರಿ? ನಮಗೆ ಹೆಚ್ಚು ಸಮಯ ಉಳಿದಿಲ್ಲ. ಇಂದು ಸಾಯದಿದ್ದರೆ ನಾಳೆ ಸಾಯುವುದು ಖಂಡಿತ. ನಾವೂ ನಮ್ಮ ಕತ್ತಿಗಳನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿಯಾಗಬೇಕಲ್ಲವೇ? ಅಲ್ಲಾಹನು ನಮಗೆ ಹುತಾತ್ಮತೆಯನ್ನಾದರೂ ಅನುಗ್ರಹಿಸಬಹುದು. ತದನಂತರ ಅವರಿಬ್ಬರು ಖಡ್ಗಗಳನ್ನು ತೆಗೆದುಕೊಂಡು ಅವಿಶ್ವಾಸಿಗಳ ಬಳಿಗೆ ಹೋಗಿ ಯುದ್ಧದಲ್ಲಿ ಜನರೊಂದಿಗೆ ಸೇರಿಕೊಂಡರು. (ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶ್ಶಾಮ್, ಪುಟ–537–538, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಅಮ್ರುಬನ್ ಸಾಬಿತ್ ಅಥವಾ ಉಸೈರಿಮ್ ಅವರ ಹೆಸರೂ ಆಗಿತ್ತು. ಅಮ್ರ್ ಬಿನ್ ಸಾಬಿತ್ ಬಿನ್ ವಕ್ಷ್ ಅನ್ಸಾರಿ, ನಾನು ಹೇಳಿದಂತೆ, ಉಸೈರಿಮ್ ಎಂಬ ಹೆಸರಿನಿಂದ ಕರೆಯಲ್ಪಟ್ಟರು. ಅವರ ತಾಯಿ ಹಝ್ರತ್ ಹುಝೈಫಾ ಬಿನ್ ಯಮಾನ್‌ನ ಸಹೋದರಿ ಆಗಿದ್ದರು. ಉಹುದ್ ದಿನದಂದು ಫಜ್ರ್ ನಮಾಝಿನ ನಂತರ ಮುಸಲ್ಮಾನರಾದರು. ಅವರು ನಮಾಝ್ ನಿರ್ವಹಿಸಲಿಲ್ಲ. ಅದರ ನಂತರ ಅವರು ಇಸ್ಲಾಂಗೆ ಮತಾಂತರಗೊಂಡರು ಮತ್ತು ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿ ಮಾಡಲು ಕುದುರೆಯ ಮೇಲೆ ಸವಾರಿ ಮಾಡಿದರು. ಮುಸ್ಲಿಮರೊಂದಿಗೆ ಸೇರಿ ಅವರು ಹುತಾತ್ಮರಾಗುವವರೆಗೂ ಜಿಹಾದ್ ಮಾಡಿದರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–358, ದಾರುಸ್ಸಲಾಮ್ ರೀಸರ್ಚ್ ಸೆಂಟರ್)

ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ಅವರು ಅಂದರೆ ಅಬು ಹುರೈರಾ(ರ) ರವರು ಸಹಾಬಗಳಿಗೆ ಹೇಳಿದರು, ಎಂದಿಗೂ ನಮಾಝ್ ನಿರ್ವಹಿಸದೆ ಸ್ವರ್ಗವನ್ನು ಪ್ರವೇಶಿಸಿದ ವ್ಯಕ್ತಿಯ ಬಗ್ಗೆ ನನಗೆ ತಿಳಿಸಿ? ಜನರಿಗೆ ಅದರ ಬಗ್ಗೆ ತಿಳಿದಿರಲಿಲ್ಲ. ಅವರು ನಿಮ್ಮನ್ನು ಅವರು ಯಾರಾಗಿದ್ದಾರೆ ಎಂದು ಕೇಳಲು ಪ್ರಾರಂಭಿಸಿದರು. ಅದಕ್ಕೆ ಅವರು ಹೇಳಿದರು

ಅವರು ಉಸ್ಯೈರಿಮ್ ಬಿನ್ ಉಸ್ಯೈರಿಮ್ ಆಗಿದ್ದಾರೆ ಅಂದರೆ ಅಮ್ರೊ ಬಿನ್ ಸಾಬಿತ್. ಒಂದು ವರದಿ ಹೀಗಿದೆ: ಉಸ್ಯೈರಿಮ್ ತನ್ನ ಸಮುದಾಯದ ಜನರ ಮುಂದೆ ಇಸ್ಲಾಂ ಧರ್ಮವನ್ನು ನಿರಾಕರಿಸುತ್ತಿದ್ದರು. ಉಹುದ್ ಯುದ್ಧ ನಡೆದಾಗ ಮತ್ತು ಹಝ್ರತ್ ಪೈಗಂಬರ್(ಸ) ಅವರು ಹೊರಟುಹೋದರು. ಇಸ್ಲಾಮಿನ ಸತ್ಯವು ಉಸ್ಯೆರರಿಗೆ ಸ್ಪಷ್ಟವಾದಾಗ, ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ನಂತರ ಅವರು ತಮ್ಮ ಕತ್ತಿಗಳೊಂದಿಗೆ ತಮ್ಮ ಜನರ ಬಳಿಗೆ ಬಂದು ಜನರೊಳಗೆ ಪ್ರವೇಶಿಸಿ ಹೋರಾಡಲು ಪ್ರಾರಂಭಿಸಿದರು. ಗಾಯಗಳು ಸಹ ಅವರನ್ನು ಕುಗ್ಗಿಸಿದವು. ಅದೇ ಸಮಯದಲ್ಲಿ, ಬನು ಅಬ್ದ್ ಅಲ್-ಅಶ್ಹಲ್‌ನ ಜನರು ತಮ್ಮ ಹುತಾತ್ಮರ ದೇಹಗಳನ್ನು ಹುಡುಕುತ್ತಿದ್ದಾಗ ಅವರು ಇದ್ದಕ್ಕಿದ್ದಂತೆ ಅವರನ್ನು ನೋಡಿದರು. ಅವರು ಆಶ್ಚರ್ಯಚಕಿತರಾಗಿ ಹೇಳಿದರು ಇವರು ಉಸ್ಯೈರಿಮ್ ಆಗಿದ್ದಾರೆ ಅವರನ್ನು ಇಲ್ಲಿಗೆ ಕರೆತಂದವರು ಯಾರು? ಅವನು ಇಸ್ಲಾಂ ಧರ್ಮವನ್ನು ತಿರಸ್ಕರಿಸಿದ್ದರಿಂದ ನಾವು ಅವನನ್ನು ಬಿಟ್ಟು ಬಂದೆವು. ನಂತರ ಅವರು ಅವರನ್ನು ಕೇಳಿದರು, ಓ ಉಸ್ಯೈರಿಮ್, ನೀವು ಇಲ್ಲಿಗೆ ಹೇಗೆ ಬಂದಿದ್ದೀರಿ? ಇದು ನಿಮ್ಮ ಜನರ ಹೆಮ್ಮೆಯಿಂದಲೋ ಅಥವಾ ಇಸ್ಲಾಂ ಧರ್ಮದ ಮೇಲಿನ ನಿಮ್ಮ ಆಕರ್ಷಣೆಯಿಂದಲೋ? ಅದಕ್ಕೆ ಅವರು ಹೇಳಿದರು: ನಾನು ಇಸ್ಲಾಂನಲ್ಲಿ ನನ್ನ ಆಸಕ್ತಿಯಿಂದ ಬಂದಿದ್ದೇನೆ, ಅಂದರೆ ನಾನು ಇಸ್ಲಾಂ ಅನ್ನು ನಿಜವೆಂದು ನಂಬಿದ್ದೇನೆ ಎಂದು ಹೇಳಿದರು. ನಾನು ಅರ್ವಶಕ್ತನಾದ ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು (ಸ)ರನ್ನು ನಂಬುವ ಮೂಲಕ ಮುಸಲ್ಮಾನನಾದೆ ಮತ್ತು ನನ್ನ ಕತ್ತಿಯನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್(ಸ) ಅವರ ಸಹವಾಸದಲ್ಲಿ ನೀವು ನೋಡುತ್ತಿರುವ ನನ್ನ ಈ ಸ್ಥಿತಿ ಹೀಗೆ ಆಗುವವರೆಗೂ ಹೋರಾಡಿದೆ. ನಂತರ ಅವರು ಜನರ ಕೈಯಲ್ಲಿ ಮೃತರಾದರು. ಹಝ್ರತ್ ಪೈಗಂಬರ್(ಸ.ಅ) ರವರಿಗೆ ಇದರ ಬಗ್ಗೆ ಪ್ರಸ್ತಾಪಿಸಿದಾಗ, ಅವರು ಸ್ವರ್ಗವಾಸಿಯಾಗಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. (ಅಲ್-ಅಸಾಬಾ ಫಿ ತಮೀಝುಸ್ಸಹಾಬ, ಸಂಪುಟ-4, ಪುಟ-501, ದಾರುಲ್ ಕುತುಬ ಇಲ್‌ಮಿಯಾ ಬೈರುತ್)

ಈ ಕುಟುಂಬದ ನಾಲ್ಕನೇ ಹುತಾತ್ಮ ಹಝ್ರತ್ ಸಲಮಾ ಬಿನ್ ಸಾಬಿತ್(ರ) ಆಗಿದ್ದಾರೆ. ಹಝ್ರತ್ ಸಲಮಾ ಬಿನ್ ಸಾಬಿತ್(ರ) ಅವರ ಪೂರ್ಣ ಹೆಸರು ಸಲಮಾ ಬಿನ್ ಸಾಬಿತ್ ಬಿನ್ ವಕ್ಶ್ ಎಂದಾಗಿದೆ. ಹಝ್ರತ್ ಸಲಮಾ(ರ) ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅಬು ಸುಫ್ಯಾನ್ ಹಝ್ರತ್ ಸಲ್ಮಾ ಬಿನ್ ಸಾಬಿತ್(ರ) ಅವರನ್ನು ವಧಿಸಿದನು. ಹಝ್ರತ್ ಸಲ್ಮಾ(ರ) ಅವರ ತಂದೆ, ಹಝ್ರತ್ ಸಾಬಿತ್ ಬಿನ್ ವಖ್ಶ್(ರ) ಮತ್ತು ಚಿಕ್ಕಪ್ಪ ಹಝ್ರತ್ ರಿಫಾ ಬಿನ್ ವಖ್ಶ್(ರ) ಮತ್ತು ಅವರ ಸಹೋದರ, ಹಝ್ರತ್ ಅಮ್ರ್ ಬಿನ್ ಸಾಬಿತ್(ರ) ಕೂಡ ಉಹುದ್ ಯುದ್ಧದಲ್ಲಿ ಹುತಾತ್ಮರಾದರು. ಈ ಕುಟುಂಬದ ಅನೇಕ ಸದಸ್ಯರು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಸಂಪುಟ-3, ಪುಟ-337, ದರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸದುಲ್‌ಗ್ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-2, ಪುಟ-291, ದಾರುಲ್ ಫಿಕರ್ ಬೈರುತ್ 2003)

ಮುಖೈರೀಖ್ ಎಂಬ ಒಬ್ಬ ಯಹೂದಿ ಬನೂ ನಝೀರ್ ಗೋತ್ರದವನಾಗಿದ್ದನು. ಮುಹಮ್ಮದ್ ಬಿನ್ ಉಮರ್ ಅಸ್ಲಾಮಿ ಹೇಳಿದ್ದರು ಇವನು ಇಸ್ಲಾಮ್ ಧರ್ಮ ಸ್ವೀಕರಿಸಿದ್ದನು ಮತ್ತು ಕೆಲವರು ಹೇಲುತ್ತಾರೆ ಇವನು ಬನೂ ಖೈನ್‌ಖಾ ಗೋತ್ರದವನಾಗಿದ್ದನು. ಕೆಲವರ ಪ್ರಕಾರ ಇವನು ಬನೂ ಸಾಲಬ ಬಿನ್ ಫಿತ್ಯೂನ್‌ನಿಂದ ಬಂದಿದ್ದನು. ಇವನು ಯಹೂದಿಗಳ ಮಹಾನ್ ವಿದ್ವಾಂಸರಲ್ಲಿ ಒಬ್ಬನಾಗಿದ್ದನು. ಅವನು ಹಝ್ರತ್ ಪೈಗಂಬರ್(ಸ) ಅವರನ್ನು ಅವರ(ಸ) ಗುಣಲಕ್ಷಣಗಳಿಂದ ಹಾಗೂ ತನ್ನ ಜ್ಞಾನದಿಂದ ಗುರುತಿಸಿಕೊಂಡನು. ಆದರೆ ಅವನ ಧರ್ಮದ ಮೇಲಿನ ಅವನ ಪ್ರೀತಿ ಅವನ ಮೇಲೆ ಮೇಲುಗೈ ಸಾಧಿಸಿತು. ವಿಶ್ವಾಸ ತರಲಿಲ್ಲ. ಶನಿವಾರದಂದು ಅವನು ತನ್ನ ಸಮುದಾಯದವರಿಗೆ ಹೇಳಿದನು ಎಲೈ ಯಹೂದಿಯರ ಸಮುದಾಯವೇ!! ಅಲ್ಲಾಹನ ಆಣೆ, ಮುಹಮ್ಮದ್(ಸ) ಅವರಿಗೆ ಸಹಾಯ ಮಾಡುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ ಎಂದು ನಿಮಗೆ ತಿಳಿದಿದೆ, ಅಂದರೆ ಉಹುದ್ ಸೈನ್ಯವು ಶುಕ್ರವಾರ ಹೊರಟುಹೋಯಿತು, ಆದ್ದರಿಂದ ಅವನು ಮರುದಿನ ಶನಿವಾರ ಹೇಳಿದನು. ಇಂದು ಸಬ್ತ್ ದಿನವಾಗಿದೆ ಎಂದು ಜನರು ಹೇಳಿದರು. ಇಂದು ಯುದ್ಧವಿಲ್ಲ. ಅದಕ್ಕೆ ಅವನು ಹೇಳಿದನು ನಿಮಗೆ ಯಾವುದೇ ಸಬ್ತ್ ಇಲ್ಲ. ನಂತರ ಅವನು ತನ್ನ ಸಮುದಾಯದ ಜನರಿಗೆ ಹೇಳಿದನು, ಇಂದು ನಾನು ಕೊಲ್ಲಲ್ಪಟ್ಟರೆ, ನನ್ನ ಸಂಪತ್ತು ಮುಹಮ್ಮದ್(ಸ) ಅವರಿಗೆ ಸೇರುತ್ತದೆ, ಅವರು ಅದರೊಂದಿಗೆ ಏನು ಬೇಕಾದರೂ ಮಾಡಬಹುದು. ನಂತರ ಅವನು ತನ್ನ ಆಯುಧವನ್ನು ತೆಗೆದುಕೊಂಡು ಹೊರಟುಹೋದನು. ಯುದ್ಧ ಪ್ರಾರಂಭವಾದಾಗ ಇವನು ಹೋರಾಡುವಾಗ ಹುತಾತ್ಮನಾದನು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಹೇಳಿದರು: ಮುಖೈರೀಖ್ ಯಹೂದಿಯರಲ್ಲಿ ಪ್ರಾಧಾನ್ಯತೆ ಹೊಂದಿದ್ದನು.

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಮುಖೈರೀಖ್ ಯಹೂದಿಯರಲ್ಲಿ ಎಲ್ಲರಿಂದ ಪ್ರಾಧಾನ್ಯತೆ ಹೊಂದಿದ್ದನು ಮತ್ತು ಪರ್ಷಿಯಾದ ಜನರಲ್ಲಿ ಸಲ್ಮಾನ್‌ನಿಂದಲೂ ಪ್ರಾಧಾನ್ಯತೆ ಹೊಂದಿದ್ದನು ಮತ್ತು ಅಬಿಸೀನಿಯಾದ ಜನರಲ್ಲಿ ಬಿಲಾಲ್‌ನಿಂದಲೂ ಪ್ರಾದಾನ್ಯತೆ ಹೊಂದಿದ್ದನು. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-4, ಪುಟ-212, ದಾರುಲ್ ಕುತುಬ್ ಒಲ್‌ಮಿಯಾ ಬೈರುತ್)

ಜೀವನಚರಿತ್ರೆಕಾರರೊಬ್ಬರು ಮುಖೈರಿಖ್ ಬಗ್ಗೆ ಬರೆದಿದ್ದಾರೆ, ಅವರು ಇಸ್ಲಾಂ ಧರ್ಮಕ್ಕಾಗಿ ಅವಿಶ್ವಾಸಿಗಳೊಂದಿಗೆ ಹೋರಾಡುವಾಗ ಅವರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹದಾಯಕ ನಾಲಿಗೆಯಿಂದ ಅವರ ಪರವಾಗಿ ಪ್ರಶಂಸೆಯ ಮಾತುಗಳನ್ನು ಹೊರಡಿಸಲಾಯಿತು. ಇದರ ಆಧಾರದ ಮೇಲೆ, ಅನೇಕ ಜೀವನಚರಿತ್ರೆಕಾರರು ಮತ್ತು ಇತಿಹಾಸಕಾರರು ಇಬ್ನ್ ಹಿಶಾಮ್, ಸುಹೈಲಿ, ಇಬ್ನ್ ಹಜರ್, ಇಬ್ನ್ ಕಸೀರ್, ಬಲಝುಾರಿ, ಖಾಜಿ ಅಯಾಜ್ ಮತ್ತು ಇಮಾಮ್ ನವಾವಿ ಮತ್ತು ಇತರರನ್ನು ಒಳಗೊಂಡಂತೆ ಮುಖೈರಿಖ್ ಅವರನ್ನು ಮುಸಲ್ಮಾನರನ್ನಾಗಿ ಮಾಡಿದ್ದಾರೆ. (ದಾ ಎರಾ ಮಾರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ-6, ಪುಟ-604)

ಇದೇ ರೀತಿಯಲ್ಲಿ ಸಹಾಬಿಯರ ತ್ಯಾಗಗಳಲ್ಲಿ ಹಝ್‌ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರ ಪ್ರಸ್ತಾಪವಿದೆ. ಅಲ್ಲಾಹನ ಮತ್ತು ರಸೂಲರ ಪ್ರೇಮವು ಮತ್ತೆಲ್ಲ ಲೌಕಿಕ ಅಭಿಲಾಷೆಗಳ ಅಗತ್ಯವಿಲ್ಲದಂತೆ ಅವರನ್ನು ಮಾಡಿತ್ತು. ಅಲ್ಲಾಹನ ಮಾರ್ಗದಲ್ಲಿ ತನ್ನ ಪ್ರಿಯ ಜೀವವನ್ನು ತ್ಯಾಗ ಮಾಡುವ ಅಭಿಲಾಷೆ ಮಾತ್ರ ಅವರಿಗೆ ಇದ್ದಿತ್ತು. ಹೀಗೆ ಅವರ ಈ ಆಸೆ ಈಡೇರಿತು. ಮತ್ತು **ಮುಜದ್ದುನ್ ಫಿಲ್ಲಾಹ್** ಎಂದರೆ ದೇವರ ಮಾರ್ಗದಲ್ಲಿ ಕಿವಿ ಕತ್ತರಿಸುವುದು, ಅವರ ಹೆಸರು ವಿಶಿಷ್ಟ ಗುರುತು ಆಯಿತು.

ಅವರ ಶಹೀದ್ ಆಗುವ ಮೊದಲು ಇದು ಜನಪ್ರಿಯ ಪ್ರಾರ್ಥನೆಯಾಗಿತ್ತು. ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ರವರ ಬಗ್ಗೆ, ಅವರ ಪ್ರಾರ್ಥನೆಯನ್ನು ಹೇಗೆ ಸ್ವೀಕರಿಸಲಾಯಿತು? ಅವರ ಹುತಾತ್ಮರಾಗುವ ಮೊದಲು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದ ಘಟನೆ ಎಲ್ಲರಿಗೂ ತಿಳಿದಿದೆ. ಇಸ್‌ಹಾಕ್ ಬಿನ್ ಸಾದ್ ಬಿನ್ ಅಬೀ ವಕ್ಕಾಸ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಉಹುದ್ ಯುದ್ಧದ ದಿನದಂದು ನನ್ನ ತಂದೆ ಸಾದ್‌ಗೆ ಹೇಳಿದರು: ಬನ್ನಿ! ಅಲ್ಲಾಹನಲ್ಲಿ ದುಆ ಮಾಡೋಣ. ಹಾಗಾಗಿ ಇಬ್ಬರು ಪಕ್ಷ ವಹಿಸಿದರು. ಮೊದಲು ಹಝ್ರತ್ ಸಾದ್ ಪ್ರಾರ್ಥಿಸಿದರು ಓ ಅಲ್ಲಾಹನೇ! ನಾನು ನಾಳೆ ಶತ್ರುವನ್ನು ಭೇಟಿಯಾದಾಗ, ಆ ಶತ್ರು ಆಕ್ರಮಣ ಮಾಡುವಲ್ಲಿ ಅತೀ ತೀವ್ರವಾಗಿರಬೇಕು, ಅತ್ಯಂತ ಬಲಿಷ್ಠ ಮತ್ತು ಕೆಚ್ಚೆದೆಯ ಶತ್ರು ಆಗಿರಬೇಕು ಮತ್ತು ಅವನ ಭಯವು ಮೇಲುಗೈ ಸಾಧಿಸುತ್ತಿರಬೇಕು. ಆದ್ದರಿಂದ ನಾನು ಅವನೊಂದಿಗೆ ಹೋರಾಡಬೇಕು ಮತ್ತು ನಿನ್ನ ಮಾರ್ಗದಲ್ಲಿ ಅವನನ್ನು ಕೊಂದು ಅವನ ಆಯುಧಗಳನ್ನು ತೆಗೆದುಕೊಳ್ಳುವಂತಾಗಬೇಕು. ಈ ಬಗ್ಗೆ ಅಬ್ದುಲ್ಲಾ ಬಿನ್ ಜಹ್ಶ್ ಆಮೀನ್ ಎಂದು ಹೇಳಿದರು. ತದನಂತರ ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಹೀಗೆ ದುಆ ಮಾಡಿದರು ಅದು ಹೀಗಿತ್ತು: ಹೇ ಅಲ್ಲಾಹ್, ಅತಿ ತೀವ್ರವಾಗಿ ಹಲ್ಲೆ ನಡೆಸುವ ಮತ್ತು ಭಯ ಹುಟ್ಟಿಸುವ ವ್ಯಕ್ತಿ ನನ್ನ ಮುಂದೆ ಬರಲಿ. ಆತನೊಂದಿಗೆ ನಾನು ನಿನ್ನ ಸಲುವಾಗಿ ಹೋರಾಡುವಂತಾಗಲಿ ಮತ್ತು ಆತನು ನನ್ನೊಡನೆ ಹೋರಾಡಲಿ. ಆತನು ನನ್ನ ಮೇಲೆ ಮೇಲುಗೈ ಸಾಧಿಸಿ ನನ್ನನ್ನು ವಧಿಸಲಿ ಹಾಗೂ ನನ್ನ ಮೂಗು ಮತ್ತು ಕಿವಿಯನ್ನು ಕತ್ತರಿಸಲಿ. ಅನಂತರ ನಾನು ಅದೇ ಸ್ಥಿತಿಯಲ್ಲಿ ನಿನ್ನ ಮುಂದೆ ಹಾಜರಾಗುವಂತಾಗಲಿ. ಆಗ ನೀನು ನನ್ನೊಡನೆ ಹೀಗೆ ಕೇಳುವಂತಾಗಲಿ: ಹೇ ಅಬ್ದುಲ್ಲಾಹ್, ಯಾರ ಮಾರ್ಗದಲ್ಲಿ ನಿನ್ನ ಮೂಗು ಮತ್ತು ಕಿವಿ ಕತ್ತರಿಸಲ್ಪಟ್ಟಿವೆ? ಆಗ ನಾನು ಹೀಗೆ ಹೇಳುವಂತಾಗಲಿ: ಹೇ ಅಲ್ಲಾಹ್, ನಿನ್ನ ಮಾರ್ಗದಲ್ಲಿ ಮತ್ತು ನಿನ್ನ ಪ್ರವಾದಿಯ ಮಾರ್ಗದಲ್ಲಿ. ಅದಕ್ಕೆ ಪ್ರತಿಕ್ರಿಯೆಯಾಗಿ, ನೀವು ಸತ್ಯವನ್ನು ಮಾತನಾಡಿದ್ದೀರಿ ಎಂದು ಹೇಳಬೇಕು. ಅದೇನೆಂದರೆ, ಸರ್ವಶಕ್ತನಾದ ಅಲ್ಲಾಹನಿಂದ ನೀವು ಸತ್ಯವನ್ನು ಹೇಳಿದ್ದೀರಿ ಎಂದು ಸರ್ವಶಕ್ತನಾದ ಅಲ್ಲಾಹನು ಕೂಡ ಹೇಳುತ್ತಾನೆ ಎಂಬ ಆಸೆಯನ್ನು ಇಟ್ಟುಕೊಂಡಿದ್ದರು. ಹಝ್ರತ್ ಸಅದ್(ರ) ಅವರು ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಅವರ ದುಆ ನನ್ನ ದುಆಗಿಂತ ಉತ್ತಮವಾಗಿದೆ ಎಂದು ಹೇಳುತ್ತಾರೆ ಏಕೆಂದರೆ ಕೊನೆಯ ದಿನ ನಾನು ಅವರ ಮೂಗು ಮತ್ತು ಎರಡೂ ಕಿವಿಗಳನ್ನು ದಾರದಿಂದ ನೇತುಹಾಕಿರುವುದನ್ನು ನೋಡಿದೆ.

(ಅಸದುಲ್ ಗ್ಗಾಬ, ಸಂಪುಟ-3, ಪುಟ-194-196, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) ಎಂದರೆ ಅವುಗಳನ್ನು ಕತ್ತರಿಸಲಾಯಿತು ಮತ್ತು ಅದನ್ನು ಪೋಣಿಸಲಾಗಿತ್ತು.

ಸಹಾಬಿಯರು ಅಲ್ಲಾಹನನ್ನು ಪ್ರೀತಿಸುವ ವಿಚಿತ್ರವಾದ ಮಾರ್ಗವನ್ನು ಹೊಂದಿದ್ದರು. ಹಝ್ರತ್ ಮತ್ಲಬ್ ಬಿನ್ ಅಬ್ದುಲ್ಲಾ ಬಿನ್ ಹಂತಬ್(ರ) ಅವರು ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ)ರು ಉಹದ್ ಯುದ್ಧಕ್ಕೆ ಹೊರಟ ದಿನದಂದು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಮದೀನದ ಬಳಿ ಶೈಖೈನ್ ಎಂಬ ಸ್ಥಳದಲ್ಲಿ ರಾತ್ರಿ ತಂಗಿದ್ದರು. ಅಲ್ಲಿ ಹಝ್ರತ್ ಉಮ್ಮೆ ಸಲಮಾ(ರ)ರವರು ಹಝ್ರತ್ ಪೈಗಂಬರ್(ಸ) ಅವರಿಗೆ ದಸ್ತಿ (ಮಾಂಸದ ತುಂಡು) ತಂದರು ಅದರಿಂದ ಹಝ್ರತ್ ಪೈಗಂಬರ್(ಸ)ರವರು ಸೇವಿಸಿದರು ಅದೇ ರೀತಿ ನಬೀಝ್ ಕೂಡ ತಂದರು ಅವರು(ಸ) ಅವರಿಂದಲೂ ಕುಡಿದರು. ನಬೀಝ್ ಅಂದರೆ ಇದು ಕೂಡ ಹರೀರ ಇದ್ದಂತೆ ತೆಳುವಾಗಿರುವ ಒಂದು ಬಗೆಯ ಆಹಾರವಾಗಿದೆ. ಆಗ ಒಬ್ಬ ವ್ಯಕ್ತಿ ನಬೀಝ್‌ನ ಆ ಬಟ್ಟಲನ್ನು ತೆಗೆದುಕೊಂಡು ಅದರಲ್ಲಿ ಉಳಿದನ್ನು ಸ್ವಲ್ಪ ಕುಡಿದನು. ನಂತರ ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ರವರು ಆ ಬಟ್ಟಲನ್ನು ತೆಗೆದುಕೊಂಡು ಅದನ್ನು ಮುಗಿಸಿದರು ಒಬ್ಬ ವ್ಯಕ್ತಿ ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ರವರಿಗೆ ಹೇಳಿದರು, ನನಗೂ ಸ್ವಲ್ಪ ಕೊಡು. ನಾಳೆ ಬೆಳಿಗ್ಗೆ ನೀವು ಎಲ್ಲಿಗೆ ಹೋಗುತ್ತೀರಿ ಎಂದು ನಿಮಗೆ ತಿಳಿದಿದೆಯೇ? ಅಂದರೆ, ಯುದ್ಧ ನಡೆಯಬೇಕು, ಯಾರು ಹುತಾತ್ಮರಾಗಬೇಕು ಮತ್ತು ಯಾರು ಬದುಕಬೇಕು ಎಂದು ಯಾರಿಗೆ ತಿಳಿದಿದೆ. ಅದಕ್ಕೆ ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಹೇಳಿದರು, ಹೌದು, ನನಗೆ ತಿಳಿದಿದೆ. ನನ್ನ ಹುತಾತ್ಮತೆಯ ಬಗ್ಗೆ ನನಗೆ ಖಚಿತವಾಗಿದೆ. ಮತ್ತೆ ಅವರು ಹೇಳಿದರು, ನನಗೆ ಬಾಯಾರಿಕೆಯಾದಾಗ ಅಲ್ಲಾಹನನ್ನು ಭೇಟಿಯಾಗುವುದಕ್ಕಿಂತ ನಾನು ಚೆನ್ನಾಗಿ ಫಲವತ್ತಾಗಿ (ಆಹಾರ ತಿಂದು) ಭೇಟಿ ಮಾಡುವುದು ನನಗೆ ಹೆಚ್ಚು ಪ್ರಿಯವಾಗಿದೆ. (ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಸಂಪುಟ-3, ಪುಟ-67, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ನಾನು ಸರ್ವಶಕ್ತನಾದ ಅಲ್ಲಾಹನನ್ನು ಭೇಟಿಯಾಗಲು ಬಯಸಿದರೆ, ನಾನು ಚೆನ್ನಾಗಿ ಹೊಟ್ಟೆ ತುಂಬಿರುವ ಸ್ಥಿತಿಯಲ್ಲಿ ಅವನನ್ನು ಭೇಟಿಯಾಗಬೇಕು. ಇದು ನನ್ನ ಆಸೆಯಾಗಿದೆ, ಅದಕ್ಕಾಗಿಯೇ ನಾನು ಅದನ್ನು ಕುಡಿಯುತ್ತಿದ್ದೇನೆ. ಸಹಾಬಿಯರು ಅಲ್ಲಾವನ್ನು ಪ್ರೀತಿಸುವ ಈ ವಿಚಿತ್ರ ಮಾರ್ಗವನ್ನು ಹೊಂದಿದ್ದಾರೆ ಮತ್ತು ಅದಕ್ಕಾಗಿ ಅವರ ತಯಾರಿ ಕೂಡ ವಿಚಿತ್ರವಾದ ಬಣ್ಣಗಳನ್ನು ಹೊಂದಿದೆ.

ಹಝ್ರತ್ ಹಂಝಾ(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರನ್ನು ಒಂದೇ ಖಬರಿನಲ್ಲಿ ದಫನ್‌ಗೊಳಿಸಲಾಗಿತ್ತು. ಹಝ್ರತ್ ಹಂಝಾ(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್(ರ)ರ ಮಾವ ಆಗಿದ್ದರು. ಶಹೀದ್ ಆಗುವಾಗ ಅಬ್ದುಲ್ಲಾಹ್ ಬಿನ್ ಜಹಶ್(ರ)ರಿಗೆ 40 ವರ್ಷಕ್ಕಿಂತ ಸ್ವಲ್ಪ ಹೆಚ್ಚಿನ ಪ್ರಾಯವಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುಲ್ಲಾ ಬಿನ್ ಜಹಶ್(ರ) ಅವರ ಆಸ್ತಿಯ ಮೇಲ್ನೋಟಗಾರರಾದರು ಮತ್ತು ಹಝ್ರತ್ ಪೈಗಂಬರ್(ಸ)ರವರು ಅವರ(ರ) ಪುತ್ರನಿಗೆ ಖೈಬರ್‌ನಲ್ಲಿ ಆಸ್ತಿಯನ್ನು ಖರೀದಿಸಿದರು.

(ಅಸದುಲ್ ಗ್ಗಾಬ, ಸಂಪುಟ-3, ಪುಟ-196, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ನಂತರ ಅಬೂಸಅದ್ ಖೈಸಮ ಬಿನ್ ಅಬೂಖೈಸಮ ರಝಿಯಲ್ಲಾಹು ಅನ್‌ಹುರ ಶಹಾದತಿನ ಪ್ರಸ್ತಾಪವಿದೆ. ಖೈಸಮ(ರ) ಉಹುದಿನ ದಿನದಂದು ರಸೂಲುಲ್ಲಾಹ್(ಸ)ರೊಡನೆ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನನಗೆ ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಅಲ್ಲಾಹನಾಣೆ, ನಾನು ಅದರ ಆಸೆಯನ್ನು ಹೊಂದಿದ್ದೆ. ನಾನು ಬದ್ರ್ ಯುದ್ಧಕ್ಕಾಗಿ ಹೋಗಲು ಚೀಟಿ ಎತ್ತಿದಾಗ ನನ್ನ ಪುತ್ರನಾದ ಸಅದ್ ಬಿನ್ ಖೈಸಮನ ಹೆಸರು ಬಂತು ಮತ್ತು ಅವನು ಶಹೀದ್ ಆದನು. ನನ್ನ ಪುತ್ರನು ಸ್ವರ್ಗದ ತೋಟಗಳಲ್ಲಿ ಮತ್ತು ಕಾಲುವೆಗಳಲ್ಲಿ ಸಂಚರಿಸುತ್ತಾ ಬಹಳ ಉತ್ತಮ ಸ್ಥಿತಿಯಲ್ಲಿ ಇರುವುದಾಗಿ ನಾನು ಸ್ವಪ್ನದಲ್ಲಿ ಕಂಡೆನು. "ನೀವು ನಮ್ಮ ಬಳಿಗೆ ಬನ್ನಿರಿ, ನಾವು ಸ್ವರ್ಗದಲ್ಲಿ ಜೊತೆಗೆ ಇರೋಣ" ಎಂದು ಅವನು ನನ್ನೊಡನೆ ಹೇಳುತ್ತಿದ್ದನು. ನಾನು ನನ್ನ ಪ್ರಭುವಿನ ವಾಗ್ದಾನವನ್ನು ಸತ್ಯವೆಂದು ಕಂಡೆನು. ಆದ್ದರಿಂದ ನಾನು ನನ್ನ ಮಗನನ್ನು ಭೇಟಿಯಾಗಲು ಬಯಸುತ್ತೇನೆ. ನನಗೆ ಅಲ್ಲಾಹನು ಶಹಾದತ್ ಸ್ಥಾನ ಮತ್ತು ಸ್ವರ್ಗದಲ್ಲಿ ನನ್ನ ಪುತ್ರನ ಜೊತೆಗೆ ಇರುವ ಸೌಭಾಗ್ಯ ಲಭಿಸಲಿಕ್ಕಾಗಿ ನೀವು ದುಆ ಮಾಡಿರಿ. ಆಗ ಹಝ್ರತ್ ಪೈಗಂಬರ್(ಸ) ದುಆ ಮಾಡಿದರು ಹಾಗೆ ಖೈಸಮ(ರ) ಉಹುದ್ ಯುದ್ಧದಲ್ಲಿ ಶಹೀದ್ ಆದರು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-4, ಪುಟ-219, ದಅರುಲ್ ಕುತುಬ್ ಇಲ್‌ಮಿಯಾ ಬೈರುತ್) (ಮುಸ್ತದ್ರಿಕ್, ಸಂಪುಟ-3, ಪುಟ-399, ಹದೀಸ್-4929, ಕಿತಾಬ್ ಮಾರಿಫತಿಸ್ಸಹಾಬ(ರ))

ಒಂದು ಒಂದು ವರದಿಯಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ)ರ ಶಹಾದತಿನ ಪ್ರಸ್ತಾಪವಿದೆ. ಅವರು ತಾನು ಶಹೀದ್ ಆಗುವುದಕ್ಕೆ ಮುಂಚೆ ತನ್ನ ಪುತ್ರನಾದ ಹಝ್ರತ್ ಜಾಬಿರ್(ರ)ರೊಡನೆ ಹೀಗೆ ಹೇಳಿದ್ದರು: ನಾನು ಶಹೀದರಲ್ಲಿ ಮೊದಲಿಗನಾಗುವೆನು ಎಂದು ನಾನು ಭಾವಿಸುತ್ತೇನೆ. ಅಲ್ಲಾಹನ ಆಣೆ, ನಾನು ನನ್ನ ಹಿಂದೆ ಹಝ್ರತ್ ಪೈಗಂಬರ್(ಸ) ಮತ್ತು ನಿನ್ನನ್ನು ಹೊರತುಪಡಿಸಿ ಯಾರನ್ನು ಅಗಲಿ ಹೋಗುತ್ತಿಲ್ಲ ನನಗೆ ಬಹಳ ಆತ್ಮೀಯರಲ್ಲಿ ನೀವಿಬ್ಬರಾಗಿದ್ದೀರಿ ಅಂದರೆ ನನಗೆ ಪ್ರಪಂಚದಲ್ಲಿ ನಿಮ್ಮಿಬ್ಬರನ್ನು ಬಿಟ್ಟರೆ ಯಾರೂ ಆತ್ಮೀಯರಲ್ಲ ಮೊದಲಿಗೆ ಹಝ್ರತ್ ಪೈಗಂಬರ್(ಸ) ಆಗಿದ್ದಾರೆ ನಂತರ ನೀನಾಗಿದ್ದೀಯ ಓ ನನ್ನ ಪುತ್ರನೇ. ನನಗೆ ಸ್ವಲ್ಪ ಸಾಲವಿದೆ. ನೀನು ಅದನ್ನು ಸಂದಾಯ ಮಾಡಬೇಕು. ನಿನ್ನ ಸಹೋದರಿಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕು. ಹಝ್ರತ್ ಜಾಬಿರ್(ರ) ಹೇಳುತ್ತಾರೆ: ಮುಂದಿನ ದಿವಸ ನನ್ನ ತಂದೆಯವರು ಮೊತ್ತಮೊದಲಿನವರಾಗಿ ಶಹೀದ್ ಆದರು. ಸತ್ಯನಿಷೇಧಿಗಳು ಅವರ ಮುಖ ಮತ್ತು ದೇಹವನ್ನು ವಿರೂಪಗೊಳಿಸಿದರು. (ಅಸದುಲ್ ಗ್ಗಾಬ, ಸಂಪುಟ-3, ಪುಟ-344, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ, ಉಹುದ್ ಯುದ್ಧದ ಶಹೀದರನ್ನು ದಫನ್ ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಬಂದಾಗ ಅವರು ಹೇಳಿದರು: ಈ ಶಹೀದರನ್ನು ಅವರ ಗಾಯಗಳ ಸಮೇತವೇ ಕಫನ್ ಹೊದಿಸಿರಿ. ಏಕೆಂದರೆ ನಾನು ಅವರ ಮೇಲೆ ಸಾಕ್ಷಿಯಾಗಿದ್ದೇನೆ. ಅಲ್ಲಾಹನ ಮಾರ್ಗದಲ್ಲಿ ಗಾಯಗೊಂಡ ಪ್ರತಿಯೊಬ್ಬ ಮುಸ್ಲಿಮನು ಖಿಯಾಮತಿನ ದಿನದಂದು ಬರುವಾಗ ಅವನ ಗಾಯದಿಂದ ರಕ್ತ ಹರಿಯುತ್ತಿರುವುದು, ಅದರ ಬಣ್ಣ ಕುಂಕುಮ ಕೇಸರಿ ಆಗಿರುವುದು. ಅದರ ಸುಗಂಧ ಕಸ್ತೂರಿಯದ್ದಾಗಿರುವುದು. ಅಲ್ಲಾಹನ ಸನ್ನಿಧಿಯಲ್ಲಿ ಇರುತ್ತಾರೆ. ಅವರಿಗೆ ಸ್ನಾನ ಮಾಡಿ ಹೊದಿಸುವ ಅಗತ್ಯವಿಲ್ಲ. ಅವರ ಉಡುಪು ಅವರ ಕಫನ್ ಆಗಿದೆ. ಎಂದರೆ ಅವರು ಅಲ್ಲಾಹನ ಪ್ರಿಯಕರ ಜನರಾಗಿರುವರು. ಹಝ್ರತ್ ಜಾಬಿರ್(ರ) ನನ್ನ ತಂದೆಗೆ ಒಂದು ಚಾದರದಲ್ಲಿ ಕಫನ್ ನೀಡಲಾಯಿತು ಮತ್ತು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು: ಅವರಲ್ಲಿ ಯಾರಿಗೆ ಪವಿತ್ರ ಖುರ್‌ಆನ್ ಹೆಚ್ಚು ತಿಳಿದಿದ್ದರು? ಈ ಹುತಾತ್ಮರನ್ನು ದಫನ್ ಮಾಡುತ್ತಿದ್ದಾಗ, ಹಝ್ರತ್ ಪೈಗಂಬರ್(ಸ) ರವರು ಪವಿತ್ರ ಖುರ್‌ಆನ್ ಬಗ್ಗೆ ಹೆಚ್ಚು ತಿಳಿದವರು ಯಾರು? ಯಾರಾದರು ಇವರಿಗೆ ಪವಿತ್ರ ಖುರ್‌ಆನ್ ಹೆಚ್ಚು ತಿಳಿದಿದೆ ಎಂದು ಸೂಚಿಸಿದಾಗ, ಹಝ್ರತ್ ಪೈಗಂಬರ್(ಸ)ರವರು ಹೇಳುತ್ತಿದ್ದರು, ಅವರ ಸಹಚರರಿಗಿಂತ ಮೊದಲು ಅವರನ್ನು ಖಬರ್‌ಗೆ ಕರೆದೊಯ್ಯಿರಿ. ಅಂದರೆ, ಅವರಿಗೆ ಖುರ್‌ಆನ್ ತಿಳಿದಿರುವ ಕಾರಣ, ಅವರನ್ನು ಮೊದಲು ದಫನ್ ಮಾಡಲಾಯಿತು.

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ಉಹುದ್ ದಿನದಂದು ಹುತಾತ್ಮರಾದ ಮೊದಲ ವ್ಯಕ್ತಿಯಾಗಿದ್ದರು. ಅವರಿಗೆ ದಫನ್ ಮಾಡುವ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಹೇಳಿದರು, ಅಬ್ದುಲ್ಲಾ ಬಿನ್ ಅಮ್ರ್(ರ) ಮತ್ತು ಅಮ್ರ್ ಬಿನ್ ಜಮುಹ್(ರ) ಅವರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಿ ಏಕೆಂದರೆ ಅವರ ನಡುವೆ ಪ್ರಾಮಾಣಿಕತೆ ಮತ್ತು ಪ್ರೀತಿ ಇತ್ತು.

ಅಲ್ಲದೆ, ಹಝ್ರತ್ ಪೈಗಂಬರ್(ಸ) ಹೇಳಿದರು, ಈ ಜಗತ್ತಿನಲ್ಲಿ ಪ್ರೇಮಿಗಳಾಗಿದ್ದ ಇಬ್ಬರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಿ. ಅಬ್ದುಲ್ಲಾ ಬಿನ್ ಅಮ್ರು(ರ) ಕೆಂಪು ಬಣ್ಣದವರಾಗಿದ್ದರು ಮತ್ತು ಅವರ ತಲೆಯ ಮುಂಭಾಗದಲ್ಲಿ ಕೂದಲು ಇರಲಿಲ್ಲ ಮತ್ತು ಹೆಚ್ಚು ಎತ್ತರವಾಗಿರಲಿಲ್ಲ ಮತ್ತು ಹಝ್ರತ್ ಅಮ್ರು ಬಿನ್ ಜಮುಹ್(ರ) ಎತ್ತರವಾಗಿದ್ದರು. ಆದ್ದರಿಂದ ಇಬ್ಬರನ್ನೂ ಗುರುತಿಸಲಾಯಿತು ಮತ್ತು ಇಬ್ಬರನ್ನೂ ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-424, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ: ಉಹುದ್ ದಿನದಂದು ನನ್ನ ತಂದೆಯನ್ನು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಅವರ ದೇಹದ ಭಾಗಗಳನ್ನು ಕತ್ತರಿಸಲಾದ ಸ್ಥಿತಿಯಲ್ಲಿ ತರಲಾಯಿತು, ಅಂದರೆ ಅವರ ದೇಹದ ಭಾಗಗಳನ್ನು ಕತ್ತರಿಸಲಾಗಿತ್ತು ವಿಶೇಶವಾಗಿ ಅವರ ಕಿವಿ ಮತ್ತು ಮೂಗು. ಅವರ ಮೃತದೇಹವನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಲಾಯಿತು. ಅವರು ಹೇಳುತ್ತಾರೆ: ನಾನು ಅವರ ಮುಖದ ಮೇಲಿನ ಬಟ್ಟೆಯನ್ನು ತೆಗೆಯಲು ಪ್ರಾರಂಭಿಸಿದಾಗ, ಜನರು ನನ್ನನ್ನು ತಡೆದರು. ಆಗ ಜನರು ಕಿರುಚುತ್ತಿರುವ ಮಹಿಳೆಯ ಧ್ವನಿಯನ್ನು ಕೇಳಿದರು ಮತ್ತು ಯಾರೋ ಅವರು ಹಝ್ರತ್ ಅಬ್ದುಲ್ಲಾ

ಬಿನ್ ಅಮ್ರ್(ರ) ಅವರ ಪುತ್ರಿ ಎಂದು ಹೇಳಿದರು. ಆಕೆಯ ಹೆಸರು ಹಝ್ರತ್ ಫಾತಿಮಾ ಬಿಂತ್ ಅಮ್ರ್(ರ) ಅಥವಾ ಅವರು ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ಅವರ ಸಹೋದರಿ ಎಂದು ಹೇಳಲಾಯಿತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಳಬೇಡ, ಏಕೆಂದರೆ ದೇವದೂತರುಗಳು ನಿರಂತರವಾಗಿ ತಮ್ಮ ರೆಕ್ಕೆಗಳಿಂದ ಅವರನ್ನು ಆವರಿಸುತ್ತಿದ್ದಾರೆ. (ಅಲ್‌ಇಸ್ತಿಯಾಬ್, ಭಾಗ-3, ಪುಟ-954, 955, ದಾರುಲ್ ಜೀಲ್ ಬೈರುತ್) ಅವರು ಸ್ವರ್ಗವಾಸಿಯಾಗಿದ್ದಾರೆ ಅದೃಷ್ಟವಂತರಾಗಿದ್ದಾರೆ ಅಳುವ ಅಗತ್ಯವಿಲ್ಲ.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ನನ್ನ ತಂದೆಯನ್ನು ಉಹುದಿನ ದಿನದಂದು ತರಲಾದಾಗ ನನ್ನ ತಂದೆಯ ಸಹೋದರಿ ಅತ್ತುಬಿಟ್ಟರು ಮತ್ತು ನಾನು ಸಹ ಅತ್ತುಬಿಟ್ಟೆ. ಜನರು ನನ್ನನ್ನು ತಡೆಯುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ನನ್ನನ್ನು ತಡೆಯಲಿಲ್ಲ. ಅನಂತರ ರಸೂಲುಲ್ಲಾಹ್(ಸ) ಹೇಳಿದರು: ನೀವು ಅತ್ತರೂ ಅಳದಿದ್ದರೂ ಯಾವುದೇ ವ್ಯತ್ಯಾಸ ಉಂಟಾಗದು. ಅಲ್ಲಾಹನಾಣೆ, ನೀವು ಅವರನ್ನು ದಫನ್ ಮಾಡುವ ವರೆಗೂ ದೇವದೂತರು ಅವರಿಗೆ ನಿರಂತರವಾಗಿ ನೆರಳು ನೀಡುತ್ತಿದ್ದರು. (ಅಲ್-ಇಸ್ತಿಯಾಬ್, ಭಾಗ-3, ಪುಟ-956, ದಾರುಲ್ ಜೀಲ್ ಬೈರುತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರತುಲ್ ಬಖರಾದ ಒಂದು ಆಯತ್ ಅನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ: "ಶಹೀದ್ ಆದ ಮುಸ್ಲಿಮರ ಕುರಿತು ಅವರು ಮೃತರು ಎಂದು ನೀವು ಹೇಳಬೇಡಿರಿ ಎಂದು ಅಲ್ಲಾಹನು ಹೇಳುತ್ತಾನೆ. ಅವರು ಅಲ್ಲಾಹನ ಜೀವಂತ ಸಿಪಾಯಿಗಳಾಗಿರುವವರು ಮತ್ತು ಅಲ್ಲಾಹನು ಖಂಡಿತ ಅವರಿಗೆ ಅದರ ಪ್ರತಿಫಲ ನೀಡುವನು." ಅವನು(ರ) ಹೇಳಿದರು, "ಆದ್ದರಿಂದ ಓರ್ವ ಸಹಾಬಿಯನ್ನು ಕೊಂದರೆ, ಅವರ ವಿರುದ್ಧ ಐವರು ಮುಶ್ರಿಕೀನರನ್ನು ಕೊಲ್ಲಲಾಯಿತು, ಮತ್ತು ಪ್ರತಿ ಯುದ್ಧದಲ್ಲಿ, ಅವಿಶ್ವಾಸಿಗಳು ಹೆಚ್ಚು ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರು, ಉಹುದ್ ಯುದ್ಧವನ್ನು ಹೊರತುಪಡಿಸಿ, ಇದರಲ್ಲಿ ಅನೇಕ ಮುಸ್ಲಿಮರು ಕೊಲ್ಲಲ್ಪಟ್ಟರು, ಆದರೆ ಇತರ ಯುದ್ಧಗಳಲ್ಲಿ ಸರ್ವಶಕ್ತನಾದ ಅಲ್ಲಾಹನು ಅವರ ಸೇಡು ತೀರಿಸಿಕೊಂಡನು." (ತಫ್ಸೀರ್ ಕಬೀರ್, ಸಂಪುಟ-2, ಪುಟ-288, ಆವೃತ್ತಿ 2004)

ಉಹುದ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಬಲಹೀನತೆಯ ಕಾರಣದಿಂದ ಕುಳಿತುಕೊಂಡು ಝುಹರ್ ನಮಾಝ್ ನಿರ್ವಹಿಸಿದರು. ಅವರ ಹಿಂದೆ ಸಹಾಬಿಯರು ಕೂಡ ಕುಳಿತುಕೊಂಡು ನಮಾಝ್ ನಿರ್ವಹಿಸಿದರು. ಹಝ್ರತ್ ಪೈಗಂಬರ್(ಸ) ರವರು ಕುಳಿತು ನಮಾಝ್ ನಿರ್ವಹಿಸಿದ್ದ ಕಾರಣ ಸಹಾಬಿಗಳೂ ಕುಳಿತು ನಮಾಝ್ ನಿರ್ವಹಿಸಿದರು. ಅವರು ಹಿಂದೆ ನಿಲ್ಲಲಿಲ್ಲ. ಶತ್ರುಗಳ ಹಿಮ್ಮೆಟ್ಟುವಿಕೆಯ ನಂತರ ಈ ನಮಾಝನ್ನು ಬಹುಶಃ ನಿರ್ವಹಿಸಲಾಯಿತು ಎಂದು ಬರಹಗಾರರು ಬರೆಯುತ್ತಾರೆ. ಸಹಾಬಿಗಳು ಕುಳಿತುಕೊಂಡು ನಮಾಝು ಮಾಡುವ ವಿಚಾರದಲ್ಲಿ ಇಮಾಮ್ ಮತ್ತು ಮುಕ್ತದಿಗಳ ನಮಾಝಿನಲ್ಲಿ ಏಕರೂಪತೆ ಇರುವಂತೆ ಮಾಡುತ್ತಿದ್ದರು. ಅದರ ನಂತರ, ಈ ಆದೇಶವನ್ನು ರದ್ದುಗೊಳಿಸಲಾಯಿತು ಅಂದರೆ ಅದು ಅಗತ್ಯವಿಲ್ಲ. ನಿಂತಲ್ಲೇ ಮುಕ್ತದಿ ಕೂಡ ನಮಾಝ್ ನಿರ್ವಹಿಸಬಹುದು. ಕುಳಿತುಕೊಂಡು ನಮಾಝ್ ನಿರ್ವಹಿಸುವವರೂ ಗಾಯಾಳಿ ಆಗಿರಬಹುದು ಮತ್ತು ಹೆಚ್ಚಿನ ಸಹಾಬಿಯರು ಗಾಯಾಗೊಂಡಿದ್ದರಿಂದ ಅವರೆಲ್ಲರು ಕುಳಿತುಕೊಂಡು ನಮಝ್ ನಿರ್ವಹಿಸಿರಬಹುದು ಆದ್ದರಿಂದ ಈ ಪದವನ್ನು ಬಳಸಿರಬಹುದು ಅಂದರೆ ಮುಸ್ಲಿಮರು ಕುಳಿತುಕೊಂಡು ನಮಾಝ್ ನಿರ್ವಹಿಸಿದರು ಮತ್ತು ನಿಂತುಕೊಂಡು ನಮಾಝ್ ನಿರ್ವಹಿಸುವವರಲ್ಲಿ ಯಾರಿಗೆ ಗಾಯವಾಗಿರಲಿಲ್ಲವೊ ಅವರಾಗಿದ್ದರು ಎಂದು ಬರಹಗಾರ ಊಹಿಸುತ್ತಾರೆ. ಮತ್ತು ಅಂತಹ ಜನರ ಸಂಖ್ಯೆ ಬಹಳ ಕಡಿಮೆ. ಹೆಚ್ಚಿನವರು ಗಾಯಗೊಂಡಿದ್ದಾರೆ. ಆದುದರಿಂದ ಬಹುಮತವನ್ನು ಪರಿಗಣಿಸಿ, ಮುಕ್ತದಿಗಳು ಕುಳಿತು ನಮಝ್ ನಿರ್ವಹಿಸಿದರು ಎಂದು ಹೇಳಲಾಗಿದೆ.
(ಸೀರತುಲ್ ಹಲಬೀಯಾ, ಸಂಪುಟ-2, ಪುಟ-324, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತುಲ್ ಹಲಬೀಯಾ ಅನುವಾದ, ಸಂಪುಟ-2, ಪುಟ-185, ದಾರುಲ್ ಇಶಾಅತ್ ಕರಾಚಿ)

ಉಹುದ್ ಯುದ್ಧದ ಶಹೀದರ ಸಂಖ್ಯೆಯನ್ನು ಉಲ್ಲೇಖಿಸಲಾಗಿದೆ. ಉಹದ್ ಯುದ್ಧದಲ್ಲಿ ಮುಸ್ಲಿಂ ಶಹೀದರ ಸಂಖ್ಯೆಗೆ ಸಂಬಂಧಿಸಿದಂತೆ, ಹೆಚ್ಚಿನ ಮತಪಂಡಿತರ ಅಭಿಪ್ರಾಯವೆಂದರೆ ಆ ದಿನದ ಒಟ್ಟು ಹುತಾತ್ಮರ ಸಂಖ್ಯೆ ಎಪ್ಪತ್ತು ಆಗಿತ್ತು, ಅವರಲ್ಲಿ ನಾಲ್ವರು ಮುಹಾಜಿರೀನ್ ಆಗಿದ್ದಾರೆ. ಅವರ ಹೆಸರುಗಳು ಹಝ್ರತ್ ಹಮ್ಝಾ(ರ), ಹಝ್ರತ್ ಮುಸ್‌ಅಬ್(ರ), ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಮತ್ತು ಹಝ್ರತ್ ಶಮ್ಮಾಸ್ ಬಿನ್ ಉಸ್ಮಾನ್(ರ). ಉಹುದ್ ಸಹೀದರ ಒಟ್ಟು ಸಂಖ್ಯೆ ಎಂಬತ್ತು, ಅದರಲ್ಲಿ ಎಪ್ಪತ್ನಾಲ್ಕು ಮಂದಿ ಅನ್ಸಾರ್‌ಗಳು ಮತ್ತು ಆರು ಮಂದಿ ಮುಹಾಜಿರೀನರು ಎಂಬುದು ಒಂದು ಮಾತು. ಆರು ಮುಹಾಜಿರೀನರು ಶಹೀದ್ ಆಗಿದ್ದರೆ, ಬಹುಶಃ ಐದನೆಯವರು ಹತೀಬ್ ಬಿನ್ ಅಬಿ ಬಲ್ತಾಹ್(ರ) ಅವರ ಗುಲಾಮರಾದ ಸಾದ್ ಮತ್ತು ಆರನೆಯವರು ಬನು ಅಬ್ದ್ ಶಮ್ಸ್(ರ) ಅವರ ಮಿತ್ರರಾಗಿದ್ದ ಸಕೀಫ್ ಬಿನ್ ಅಮ್ರೋ ಎಂದು ಅಲ್ಲಾಮಾ ಇಬ್ನ್ ಹಜರ್ ಅಸ್ಕಲಾನಿ ಹೇಳುತ್ತಾರೆ.

'ಉಯ್ಯುನುಲ್-ಅಸ್ರ್' ಎಂಬ ಪುಸ್ತಕವಿದೆ, ಅದರಲ್ಲಿ ಹುತಾತ್ಮರ ಒಟ್ಟು ಸಂಖ್ಯೆ ತೊಂಬತ್ತಾರು ಎಂದು ಹೇಳಲಾಗಿದೆ. ಅವಿಶ್ವಾಸಿಗಳಲ್ಲಿ ಮೃತರ ಒಟ್ಟು ಸಂಖ್ಯೆ ಮೂವತ್ತಮೂರು. ಈ ಅವಿಶ್ವಾಸಿಗಳ ಸಂಖ್ಯೆ ಇಪ್ಪತ್ತೆರಡು ಎಂದು ಒಂದು ಮಾತಿದೆ. ಈ ಯುದ್ಧದಲ್ಲಿ ಹಝ್ರತ್ ಹಮ್ಝಾ(ರ) ಮಾತ್ರ ಮೂವತ್ತೊಂದು ಅವಿಶ್ವಾಸಿಗಳನ್ನು ವಧಿಸಿದರು ಎಂಬ ವರದಿ ಇದೆ. (ಸೀರತುಲ್ ಹಲಬೀಯಾ, ಸಮಪುಟ-2, ಪುಟ-346-347, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಉಯೂನುಲ್ ಅಸರ್, ಸಂಪುಟ-2, ಪುಟ-47, ದಾರ್ ಇಬ್ನೆ ಕಸೀರ್ ಬೈರುತ್)

ಅವರ ಸತ್ತವರ ಒಟ್ಟು ಸಂಖ್ಯೆ ಮೂವತ್ತೂರು ಮಾತ್ರ ಆಗಿದ್ದರಿಂದ ಈ ವರದಿಯು ಸರಿಯಾಗಿಲ್ಲ ಎಂದು ಭಾಸವಾಗುತ್ತದೆ. ಉಹುದ್‌ನ ಶಹೀದರ ಸಂಖ್ಯೆಯ ಬಗ್ಗೆ ಜೀವನಚರಿತ್ರೆಕಾರರು ಬರೆಯುತ್ತಾರೆ, ಉಹುದ್ ಯುದ್ಧದಲ್ಲಿ ಕಾಫಿರ್‌ಗಳಿಂದ ಹುತಾತ್ಮರಾದ ಸಹಾಬಿಗಳ ಸಂಖ್ಯೆಯ ಬಗ್ಗೆ ವಿಭಿನ್ನ ಹೇಳಿಕೆಗಳಿವೆ. ಇತಿಹಾಸಕಾರರು, ಜೀವನಚರಿತ್ರೆಕಾರರು ಮತ್ತು ಮುಹದ್ದಿಸ್‌ಗಳು ಉಹುದ್‌ನ ಶಹೀದರ ಸಂಖ್ಯೆ 100 ರಿಂದ 180 ರವರೆಗೆ ವಿಭಿನ್ನ ಹೇಳಿಕೆಗಳನ್ನು ಹೊಂದಿದ್ದಾರೆ, ಆದರೆ ಉಹುದ್ ದಿನದಂದು ಎಪ್ಪತ್ತು ಸಹಾಬಿಗಳು ಹುತಾತ್ಮರಾದರು ಎಂದು ಹೇಳಲಾಗುತ್ತದೆ.

(ದೈರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ-7, ಪುಟ 39-40)

ಉಹುದ್ ಯುದ್ಧದ ಶಹೀದರ ನಮಾಝೆ ಜನಾಝು ಹಾಗೂ ತದ್‌ಫೀನ್ ಬಗ್ಗೆ ಉಲ್ಲೇಖವೂ ಇದೆ. ಉಹುದ್ ಯುದ್ಧದ ಶಹೀದರ ನಮಾಝೆ ಜನಾಝುದ ನಿರ್ವಹಣೆಯ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಸಹೀಹ್ ಬುಖಾರಿಯ ಒಂದು ವರದಿ ಹೀಗಿದೆ ಅದರಲ್ಲಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದಲ್ಲಿ ಶಹೀದ್ ಆದ ಇಬ್ಬಿಬ್ಬರನ್ನು ಒಂದೇ ಬಟ್ಟೆಯಲ್ಲಿ ಒಟ್ಟುಗೂಡಿಸಿದ ನಂತರ ಅವರಲ್ಲಿ ಯಾರು ಹೆಚ್ಚು ಪವಿತ್ರ ಖುರ್‌ಆನ್‌ನ ತಿಳಿದಿದ್ದಾರೆ ಎಂದು ಕೇಳುತ್ತಿದ್ದರು. ನಂತರ ಅವರಲ್ಲಿ ಒಬ್ಬರ ಕಡೆಗೆ ಸೂಚಿಸಿದಾಗ ಹಝ್ರತ್ ಪೈಗಂಬರ್(ಸ)ರು ಅವರನ್ನು ಖಬರ್‌ನಲ್ಲಿ ಮೊದಲ ಸ್ಥಾನದಲ್ಲಿ ಇರಿಸುತ್ತಿದ್ದರು. ಒಂದೇ ಬಟ್ಟೆಯಲ್ಲಿದ್ದರೂ ಬಲ-ಎಡಕ್ಕೆ ಇರಿಸುತ್ತಿದ್ದರು. ಮೊದಲು ಅವನನ್ನು ದಫನ್ ಮಾಡಲಾಗುತ್ತಿತ್ತು ನಂತರ ಅದರೊಂದಿಗೆ ಇತರರನ್ನು. ಮತ್ತೆ ಅವರು ಖಿಯಾಮತ್ ದಿನದಂದು ನಾನು ಈ ಜನರಿಗೆ ಸಾಕ್ಷಿಯಾಗಿದ್ದೇನೆ ಎಂದು ಹೇಳುತ್ತಿದ್ದರು ಮತ್ತು ಅವರನ್ನು ಅವರ ರಕ್ತದಲ್ಲಿ ದಫನ್ ಮಾಡಲು ಆದೇಶಿಸಿದರು. ಅವರಿಗೆ ಸ್ನಾನ ಮಾಡಿಸಲಿಲ್ಲ ಅಥವಾ ಅವರ ನಮಾಝೆ ಜನಾಝುವನ್ನು ನಿರ್ವಹಿಸಲಿಲ್ಲ. (ಸಹೀಹ್ ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್-1343)

ಸಹೀಹ್ ಬುಖಾರಿಯ ಇನ್ನೊಂದು ವರದಿ ಇದೆ. ಹಝ್ರತ್ ಪೈಗಂಬರ್(ಸ)ರು ಒಂದು ದಿನ ಬಂದು ಉಹುದ್ ಯುದ್ಧದ ಶಹೀದರ ನಮಾಝೆ ಜನಾಝುವನ್ನು ನಿರ್ವಹಿಸಿದರು ಎಂದು ಹಝ್ರತ್ ಉಕ್ಬಾ ಬಿನ್ ಆಮಿರ್(ರ) ಹೇಳುತ್ತಾರೆ.

ಬುಖಾರಿಯ ಇನ್ನೊಂದು ವರದಿಯಲ್ಲಿ, ಹಝ್ರತ್ ಪೈಗಂಬರ್(ಸ)ರವರು ಉಹುದ್ ಯುದ್ಧದ ಶಹೀದರ ನಮಾಝೆ ಜನಾಝುವನ್ನು ಎಂಟು ವರ್ಷಗಳ ನಂತರ ನಿರ್ವಹಿಸಿದರು ಎಂದು ಹೇಳಲಾಗುತ್ತದೆ. (ಸಹೀಹ್ ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್-1344) (ಸಹೀಹ್ ಬುಖಾರಿ, ಕಿತಾಬುಲ್ ಮಘಾಝಿ, ಹದೀಸ್-4042)

ಇಲ್ಲಿ ವಿಭಿನ್ನ ವರದಿಗಳಿವೆ. ಬೇರೆ ಬೇರೆ ಕಾಲಘಟ್ಟದಲ್ಲಿ ಬೆಳಕಿಗೆ ಬಂದ ಸಂಗತಿಗಳನ್ನು ನಿರೂಪಕರು ಪ್ರಸ್ತುತಪಡಿಸಿದ್ದಾರೆ, ಆದರೆ ನಮಾಝೆ ಜನಾಝುವನ್ನು ಆ ಸಮಯದಲ್ಲಿ ನಿರ್ವಹಿಸಲಿಲ್ಲ, ಅದು ಸ್ವಲ್ಪ ಸಮಯದ ನಂತರ ನಿರ್ವಹಿಸಲ್ಪಟ್ಟಿದೆ ಎಂದು ತೋರುತ್ತದೆ.

ಉಹುದ್ ಯುದ್ಧದ ಶಹೀದ್‌ರನ್ನು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಕರೆತರಲಾಗುತ್ತಿತ್ತು ಹುಝೂರ್(ಸ)ರವರು ಹತ್ತು ಹತ್ತು ಶಹೀದರ ನಮಾಝೆ ಜನಾಝು ನಿರ್ವಹಿಸುತ್ತಿದ್ದರು ಮತ್ತು ಹಝ್ರತ್ ಹಮ್‌ಝಾ(ರ)ರ ಮೃತದೇಹವನ್ನು ರಸೂಲುಲ್ಲಾಹ್(ರ) ಬಳಿಯೇ ಇತ್ತು

(ಪುಟ-11ರಲ್ಲಿ ಮುಂದುವರಿಸಲಾಗಿದೆ)

# ಖುತ್‌ಬ ಜುಮುಅ

**ಹಝ್ರತ್ ಮುಸ್ಲಿಹ್ ಮೌಊದ್(ರ)ರ ಖಿಲಾಫತ್‌ನ 52 ವರ್ಷಗಳ ಕಾಲ ಖಿಲಾಫತ್ ಅವಧಿಯ ಪ್ರತಿಯೊಂದು ದಿನವೂ ಈ ಭವಿಷ್ಯವಾಣಿಯ ಈಡೇರಿಕೆಯ ವೈಭವವನ್ನು ಪ್ರಕಟಗೊಳಿಸುತ್ತಿದೆ**

ಮುಸ್ಲಿಂ ಸಮುದಾಯದ ಸುಧಾರಣೆ ಮತ್ತು ಕಲ್ಯಾಣದ ಸಮಸ್ಯೆಯನ್ನು ಎದುರಿಸಿದಾಗಲ್ಲೆಲ್ಲಾ, ನಿಮ್ಮ ಪ್ರಾಯೋಗಿಕ ಸಲಹೆಗಳು ನಮ್ಮ ಧೈರ್ಯ ಹೆಚ್ಚಿಸಲು ನಮಗೆ ಸಹಾಯ ಮಾಡುತ್ತಿತ್ತು. ಪಕ್ಷಪಾತದ ಹಗೆ ಅವರಲ್ಲಿ ಹೆಸರಿಗೆ ಕೂಡ ಇದ್ದಿರಲಿಲ್ಲ. ಅವರು ಅತ್ಯಂತ ಬುದ್ಧಿವಂತರಾಗಿದ್ದರು.... ನಾವು ಹತಾಶೆ ಮತ್ತು ಖಿನ್ನತೆಯ ಚಿತ್ರಣದಲ್ಲಿ ಅವರನ್ನು ಭೇಟಿಯಾಗಲು ಹೋಗುತ್ತಿದ್ದೆವು ಮತ್ತು ನಾವು ಹೊರಬಂದಾಗ, ಹತಾಶತೆಯ ಮೋಡಗಳು ಮೇಲಕ್ಕೆತ್ತಿ, ಗುರಿಯಲ್ಲಿ ಯಶಸ್ಸು ನಮ್ಮ ಮುಂದೆ ಗೋಚರಿಸುತ್ತಿತ್ತು. ಅವರು ಭಾರವಾದ ವಾದಗಳನ್ನು ಮತ್ತು ಪ್ರಾಯೋಗಿಕ ಮಾತುಗಳನ್ನು ಆಡುತ್ತಿದ್ದರು ಮತ್ತು ನಂತರ, ಅವರು ತ್ಯಾಗ ಮತ್ತು ಎಲ್ಲಾ ರೀತಿಯ ಸಹಕಾರವನ್ನು ಸಹ ನೀಡುತ್ತಿದ್ದರು, ಅದು ನಮ್ಮಲ್ಲಿ ಧೈರ್ಯ ಮತ್ತು ಧೈರ್ಯದ ಭಾವನೆಗಳನ್ನು ತುಂಬುತ್ತಿತ್ತು. (ಮೌಲಾನ ಗ್ಹುಲಾಮ್ ರಸೂಲ್ ಮೆಹರ್, ಇನ್‌ಖಿಲಾಬ್ ಸಂಪಾದಕರು)

ನಾನು ಇಂದಿನ ತನಕ ಇಂತಹ ವಿವೇಕಯುತ ಮಾತುಕತೆ ಮತ್ತು ಇಂತಹ ಸಮರ್ಥ ಭಾಷಣವನ್ನು ಯಾವನೇ ಮುಸ್ಲಿಮನ ಬಾಯಿಯಿಂದ ಆಲಿಸಿಲ್ಲ. ನಿಮ್ಮ ಖಲೀಫರು ಬಹಳ ಶ್ರೇಷ್ಠ ವಿದ್ವಾನ್ ಎಂದು ತೋರುತ್ತದೆ. ಧಾರ್ಮಿಕ ಲೋಕದ ಮೇಲೆ ಅವರಿಗೆ ಆಳವಾದ ದೃಷ್ಟಿಯಿದೆ. (ಅಮೇರಿಕಾದ ಪಾದ್ರಿ)

ಸಾಮಾನ್ಯ ಮುಸ್ಲಿಮರನ್ನು ಜೊತೆಜೊತೆಯಲ್ಲಿ ನಡೆಸುವಲ್ಲಿ ನಿಮ್ಮ ನಾಯಕತ್ವದಲ್ಲಿ ನೀವು ಪ್ರಾರಂಭಿಸಿದ ಮತ್ತು ಯಶಸ್ವಿಗೊಳಿಸಿದ ಕಾರ್ಯದ ತತ್ವವು ಪ್ರತಿಯೊಬ್ಬ ನ್ಯಾಯಯುತ ಮನಸ್ಸಿನ ಮುಸ್ಲಿಂ ಮತ್ತು ನೀತಿವಂತರಿಂದ ಗೌರವವನ್ನು ಪಡೆಯುತ್ತಿದೆ. (ಸಿಯಾಸತ್ ಪತ್ರಿಕೆ ಲಾಹೋರ್)

He has a good mind and carefully thought out his condtitutional Scheme.
(Edwin Samuel Montagu, Secretary Of State of India)

ಬಹಳ ದೀರ್ಘ ಕಾಲದ ನಂತರ ಲಾಹೋರಿನಲ್ಲಿ ಇಂತಹ ಭಾಷಣವನ್ನು ಆಲಿಸಲು ಸಾಧ್ಯವಾಯಿತು. ವಿಶೇಷವಾಗಿ ಪವಿತ್ರ ಖುರ್‌ಆನಿನ ವಚನಗಳಿಂದ ಮಿರ್ಝಾ ಸಾಹಿಬ್ ನೀಡಿದ ವ್ಯಾಖ್ಯಾನ ಅತ್ಯಂತ ಉತ್ತಮವಾಗಿತ್ತು. ನನಗೆ ಈ ಭಾಷಣದಿಂದ ಲಭಿಸುತ್ತಿರುವ ಅನುಭೂತಿ ಹೊರಟುಹೋಗದೇ ಇರಲು ನಾನು ನನ್ನ ಭಾಷಣವನ್ನು ಹೆಚ್ಚು ವಿಸ್ತರಿಸಲು ಬಯಸುವುದಿಲ್ಲ. (ಡಾ॥ ಅಲ್ಲಾಮಾ ಮುಹಮ್ಮದ್ ಇಖ್ಬಾಲ್)

ಮಿರ್ಝಾ ಮಹ್ಮೂದ್ ಅಹ್ಮದ್(ರ) ಖಿಲಾಫತಿನ ಸ್ಥಾನಕ್ಕೇರಿದ ನಂತರ ಯಾವ ರೀತಿಯಲ್ಲಿ ತನ್ನ ಜಮಾಅತನ್ನು ಸಂಘಟಿಸಿದರು ಮತ್ತು ಯಾವ ರೀತಿಯಲ್ಲಿ ಸದರ್ ಅಂಜುಮನ್ ಅಹ್ಮದಿಯಾವನ್ನು ಒಂದು ಸಕ್ರಿಯ ಮತ್ತು ಜೀವಂತ ಸಂಘಟನೆಯನ್ನಾಗಿ ಮಾಡಿದರೋ ಅದರಿಂದ ಅವರ ಅಪಾರವಾದ ಆಡಳಿತಾತ್ಮಕ ಶಕ್ತಿಯ ಬಗ್ಗೆ ಅರಿವಾಗುತ್ತದೆ. ಅವರ ಬಳಿ ಯಾವುದೇ ವಿಶ್ವವಿದ್ಯಾನಿಲಯದ ಡಿಗ್ರಿ ಇರಲಿಲ್ಲ. ಆದರೆ ಅವರು ವೈಯಕ್ತಿಕವಾಗಿ ಅಧ್ಯಯನ ನಡೆಸಿ ತನ್ನನ್ನು ನಿಜವಾಗಿಯೂ ವಿದ್ವಾಂಸರನ್ನಾಗಿ ಕರೆಯಲ್ಪಡಲು ಅರ್ಹರನ್ನಾಗಿ ಮಾಡಿದರು. ಮಿರ್ಝಾ ಸಾಹಿಬ್‌ರು ಅತ್ಯಂತ ಪ್ರಜ್ಞಾವಂತ ಮತ್ತು ನಿಪುಣ ಲೇಖಕರು ಆಗಿದ್ದರು ಮತ್ತು ಅವರು ಪ್ರತಿಯೊಂದು ಸಂದರ್ಭವನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ಉಪಯೋಗಿಸುತ್ತಿದ್ದರು. ಅದರಿಂದ ಅವರ ಜಮಾಅತಿನ ಪ್ರಗತಿಯ ಮಾರ್ಗಗಳು ತೆರೆಯಲ್ಪಡುತ್ತಿದ್ದುವು. (ಮಿಯಾಂ ಮುಹಮ್ಮದ್ ಶಫೀ)

**ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿಯ ಕೆಲವು ಮಗ್ಗುಲುಗಳನ್ನು ಪ್ರಸ್ತಾಪಿಸುತ್ತೇನೆ, ಹಾಗೂ ನ್ಯಾಯಯುತ ಅಹ್ಮದಿಯೇತರ ಗಣ್ಯವ್ಯಕ್ತಿಗಳ ಅನಿಸಿಕೆಗಳ ಪ್ರಸ್ತಾವನೆ**

**ಪಾಕಿಸ್ತಾನ ಹಾಗೂ ಯೆಮನ್‌ನ ಅಹ್ಮದೀಯರಿಗೋಸ್ಕರ ಮತ್ತು ಮುಸ್ಲಿಮ್ ಉಮ್ಮತಿಗೆ ಮತ್ತು ಲೋಕದ ಸಾಮಾನ್ಯ ಪರಿಸ್ಥಿತಿಗಳಿಗೆ ದುಆ ಮಾಡಲು ಮನವಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **23-02-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.
اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದು ನಾನು ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿಯ ಕೆಲವು ಮಗ್ಗುಲುಗಳನ್ನು ಪ್ರಸ್ತಾಪಿಸುತ್ತೇನೆ. ಪ್ರತಿಯೊಬ್ಬ ಅಹ್ಮದಿಗೆ ತಿಳಿದಿರುವಂತೆ ಈ ಭವಿಷ್ಯವಾಣಿ ಈಡೇರಿದ್ದಕ್ಕಾಗಿ ಪ್ರತಿ ವರ್ಷ ಜಲ್ಸವನ್ನು ಸಹ ನಡೆಸಲಾಗುತ್ತದೆ. ಇದು ಫೆಬ್ರವರಿ 20, 1886ರ ಭವಿಷ್ಯವಾಣಿಯಾಗಿದೆ. ಅನೇಕ ಗುಣಗಳನ್ನು ಹೊಂದಿರುವ ಒಬ್ಬ ಪುತ್ರನ ಬಗ್ಗೆ ಇದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಸುವಾರ್ತೆ ನೀಡಲಾಗಿತ್ತು. ಆದರೆ ಈ ಕುರಿತು ಹೇಳುವುದಕ್ಕೆ ಮುಂಚಿತವಾಗಿ ಮಕ್ಕಳ ಮತ್ತು ಕೆಲವು ಯುವಕರ ಒಂದು ಪ್ರಶ್ನೆಗೆ ನಾನು ಉತ್ತರ ನೀಡಲು ಬಯಸುತ್ತೇನೆ. ಅದೇನೆಂದರೆ, ನಾವು ಹುಟ್ಟುಹಬ್ಬ ಆಚರಿಸದೇ ಇರುವಾಗ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಹುಟ್ಟುಹಬ್ಬವನ್ನು ಏಕೆ ಆಚರಿಸಲಾಗುತ್ತದೆ ಎಂದು ಅವರು ಪ್ರಶ್ನಿಸುತ್ತಾರೆ.

ಈ ಬಗ್ಗೆ ಗೊತ್ತಿರಬೇಕಾದ ಸಂಗತಿಯೇನೆಂದರೆ, ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ)ರ ಹುಟ್ಟುಹಬ್ಬವನ್ನು ಆಚರಿಸಲಾಗುವುದಿಲ್ಲ. ಬದಲಾಗಿ ಆ ಭವಿಷ್ಯವಾಣಿ ಈಡೇರಿದ ಕಾರಣದಿಂದ ಜಲ್ಸ ನಡೆಸಲಾಗುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಜನನ ಕ್ರಿ.ಶ. 1889, ಜನವರಿ 12ರಂದು ಆಗಿತ್ತು. ಮುಸ್ಲಿಹ್ ಮೌಊದ್(ರ)ರ ಭವಿಷ್ಯವಾಣಿ ಏನು ಎಂಬುದರ ಕುರಿತು ಹೆತ್ತವರು ಮಕ್ಕಳಿಗೆ ಓದಿ ಹೇಳಿಕೊಡಬೇಕು ಮತ್ತು ಮನವರಿಕೆ ಮಾಡಿಸಬೇಕು. ಇದೊಂದು ಮಹತ್ತಾದ

ಭವಿಷ್ಯವಾಣಿಯಾಗಿದೆ. ಹಿಂದಿನ ದೈವಿಕ ಗ್ರಂಥಗಳಲ್ಲಿ ಇರುವ ಪ್ರಕಾರ ಮತ್ತು ಪ್ರವಾದಿಗಳು ಸುವಾರ್ತೆ ನೀಡಿದಂತೆ ಹಾಗೂ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ಇದನ್ನು ಘೋಷಿಸಲು ಹೇಳಿದ್ದನು.

ಇದೊಂದು ದೀರ್ಘವಾದ ಭವಿಷ್ಯವಾಣಿಯಾಗಿದೆ. ಇದರ ಆರಂಭಿಕ ಭಾಗವನ್ನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: **"ಬಿಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝ ವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝುರ್ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿಯಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ. ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಈ ಭವಿಷ್ಯವಾಣಿಯಲ್ಲಿ ಮುಂದೆ ಆ ಪುತ್ರನ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ. ಅವುಗಳಲ್ಲಿ ಒಂದೆರಡರ ಕುರಿತು ನಾನು ಪ್ರಸ್ತಾಪಿಸುತ್ತೇನೆ. "ಪುತ್ರನು ಬಹಳ ಬುದ್ಧಿವಂತ ಮತ್ತು ವಿವೇಕಶಾಲಿ ಆಗುವನು. ಅವನನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗುವುದು. ಬಂಧಿಗಳ ಬಿಡುಗಡೆಗೆ ಅವನು ಕಾರಣೀಭೂತನಾಗುವನು." (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ-5, ಪುಟ-647) ಎಂದು ಭವಿಷ್ಯವಾಣಿಯಲ್ಲಿ ನುಡಿಯಲಾಗಿದೆ.

ಇದು ದೀರ್ಘವಾದ ಆ ಭವಿಷ್ಯವಾಣಿಯ ಕೆಲವು ಸಾಲುಗಳಾಗಿವೆ. ಹೇಳಲಾದ ಕಾಲಾವಧಿಯೊಳಗೆ ಆ ಪುತ್ರನು ಜನಿಸಿದ್ದನ್ನು ನಾವು ನೋಡಿದೆವು. ಅವರು ಭವಿಷ್ಯವಾಣಿಯಲ್ಲಿ ನುಡಿಯಲಾದ ಎಲ್ಲ ಐವತ್ತು ಐವತ್ತೆರಡು ಸಂಗತಿಗಳ ಸಾಕ್ಷಾತ್ಕಾರವಾದರು. ಆದಾಗ್ಯೂ ನಾನು ಹೇಳಿದಂತೆ ನಾನು ಇದರಿಂದ ಕೇವಲ ಎರಡು ಅಥವಾ ಮೂರು ಅಂಶಗಳನ್ನು ತೆಗೆದುಕೊಂಡಿದ್ದೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ)ರ ಖಿಲಾಫತ್‌ನ 52 ವರ್ಷಗಳ ಕಾಲ ಖಿಲಾಫತ್ ಅವಧಿಯ ಪ್ರತಿಯೊಂದು ದಿನವೂ ಈ ಭವಿಷ್ಯವಾಣಿಯ ಈಡೇರಿಕೆಯ ವೈಭವವನ್ನು ಪ್ರಕಟಗೊಳಿಸುತ್ತಿತ್ತು ಮತ್ತು ಅಹ್ಮದಿಯಾ ಜಮಾಅತಿನ ಪ್ರಗತಿಯ ಪ್ರತಿಯೊಂದು ದಿನವೂ ಇದರ ಬೆಳಗುವ ಸಾಕ್ಷಿಯಾಗಿದೆ. ಈ ಭವಿಷ್ಯವಾಣಿಗೆ ಸಂಬಂಧಪಟ್ಟು ನಾನು ನೀತಿವಂತರಾದ ಕೆಲವು ವ್ಯಕ್ತಿಗಳ ಸಾಕ್ಷ್ಯಗಳನ್ನು ಮುಂದಿರಿಸುತ್ತೇನೆ. ಅವರಿಗೆ ಜಮಾಅತಿನೊಂದಿಗೆ ಯಾವುದೇ ಸಂಬಂಧವಿಲ್ಲ ಮತ್ತು ಅವರು ಅಖಂಡ ಭಾರತದ ಪ್ರಸಿದ್ಧ ವ್ಯಕ್ತಿಗಳಾಗಿದ್ದರು. ಆದಾಗ್ಯೂ, ನಾನು ಭವಿಷ್ಯವಾಣಿಯ ಬಗ್ಗೆ ಪ್ರಸ್ತಾಪಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಜಮಾತ್‌ನೊಂದಿಗೆ ಯಾವುದೇ ಸಂಬಂಧವಿಲ್ಲದ ಮತ್ತು ಉಪಖಂಡದಲ್ಲಿ ಪ್ರಸಿದ್ಧ ವ್ಯಕ್ತಿಗಳಾಗಿರುವ ಇಂತಹ ನೀತಿವಂತರ ಸಾಕ್ಷ್ಯಗಳನ್ನು ನಾನು ಪ್ರಸ್ತುತಪಡಿಸುತ್ತೇನೆ.

ಒಬ್ಬ ಸಂಶೋಧಕ, ಲೇಖಕ, ಸಾಹಿತಿ, ಅಂಕಣಗಾರ ಹಾಗೂ ಚರಿತ್ರೆಗಾರರಾದ ಮೌಲಾನಾ ಗ್ಹುಲಾಂ ರಸೂಲ್ ಮಹರ್ ಸಾಹಿಬ್ ಅವರು 1885ರಲ್ಲಿ ಜಲಂಧರ್‌ನಲ್ಲಿ ಜನಿಸಿದರು. ದಿನಪತ್ರಿಕೆ ಝಮೀನ್‌ದಾರ್‌ನಿಂದ ಸಂಪರ್ಕಹೊಂದಿದ್ದರು. ನಂತರ, ಮೌಲಾನಾ ಅಬ್ದುಲ್ ಮಜೀದ್ ಸಾಲಿಕ್ ಅವರೊಂದಿಗೆ ಜೊತೆಗೂಡಿ ಅವರು ಲಾಹೋರ್‌ನಿಂದ ಅಖ್ಬಾರ್ ಇನ್‌ಖಿಲಾಬ್ ಅನ್ನು ಪ್ರಕಟಿಸಿದರು. 20 ಮತ್ತು 25 ಡಿಸೆಂಬರ್ 1966 ರಂದು, ಲಾಹೋರ್‌ನ ಶೇಖ್ ಅಬ್ದುಲ್ ಮಜೀದ್ ಸಾಹಿಬ್ ಮೌಲಾನಾ ಸಾಹಿಬ್ ಅವರ ಸೇವೆಯಲ್ಲಿ ಬಂದರು. ಸಂವಾದದಲ್ಲಿ, ಮೌಲಾನಾ ಗುಲಾಮ್ ರಸೂಲ್ ಮೆಹರ್ ಸಾಹಿಬ್ ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಬಗ್ಗೆ ಹೇಳಿದರು: ಆ ಮಹತ್ತಾದ ವ್ಯಕ್ತಿಯ ಸಾಧನೆಗಳ ಕುರಿತು ಇರುವ ಸಂಪೂರ್ಣ ಮಾಹಿತಿ ನಿಮ್ಮ ಯಾವುದೇ ಗ್ರಂಥದಲ್ಲಿ ಇಲ್ಲ. ನಾವು ಅವರನ್ನು ಬಹಳ ಸಮೀಪದಿಂದ ನೋಡಿದ್ದೇವೆ. ಅವರನ್ನು ಅನೇಕ ಬಾರಿ ಭೇಟಿ ಮಾಡಿದ್ದೇವೆ. ಮುಸ್ಲಿಂ ಸಮುದಾಯಕ್ಕಾಗಿ ಅವರು ಪರಿಪೂರ್ಣವಾದ ತ್ಯಾಗಿಯಾಗಿದ್ದರು. ಮುಂದೆ ಅವರು ಹೇಳಿದರು: ಒಮ್ಮೆ ನನಗೆ ರಾತ್ರಿಯ ಸಮಯದಲ್ಲಿ ಹಝ್ರತ್ ಸಾಹಿಬ್ ಅವರನ್ನು ಭೇಟಿಯಾಗಬೇಕಾಯಿತು ಆದ್ದರಿಂದ ರಾತ್ರೋ ರಾತ್ರಿ ಅವರ ಬಳಿ ಖಾದಿಯಾನ್‌ಗೆ ಹೋಗಿ ಹಝ್ರತ್ ಸಾಹಿಬ್ ಅವರನ್ನು ಭೇಟಿಯಾದೆ. ಆ ಪ್ರಯಾಣವು ಇನ್ನೂ ನನ್ನ ಕಣ್ಮುಂದೆ ಇದೆ. ಆ ವ್ಯಕ್ತಿಯ ಹೃದಯದಲ್ಲಿ ಮಾನವೀಯತೆಗಾಗಿ ಅಪಾರವಾದ ನೋವಿತ್ತು. ಅಂದರೆ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಹೃದಯದಲ್ಲಿ ಬಹಳ ನೋವಿತ್ತು. ಮತ್ತು ಮುಸ್ಲಿಂ ಸಮುದಾಯದ ಸುಧಾರಣೆ ಮತ್ತು ಕಲ್ಯಾಣದ ಸಮಸ್ಯೆಯನ್ನು ಎದುರಿಸಿದಾಗಲ್ಲೆಲ್ಲಾ, ನಿಮ್ಮ ಪ್ರಾಯೋಗಿಕ ಸಲಹೆಗಳು ನಮ್ಮ ಧೈರ್ಯ ಹೆಚ್ಚಿಸಲು ನಮಗೆ ಸಹಾಯ ಮಾಡುತ್ತಿತ್ತು. ಪಕ್ಷಪಾತದ ಹಗೆ ಅವರಲ್ಲಿ ಹೆಸರಿಗೆ ಕೂಡ ಇದ್ದಿರಲಿಲ್ಲ. ಅವರು ಅತ್ಯಂತ ಬುದ್ಧಿವಂತರಾಗಿದ್ದರು.

ಭವಿಷ್ಯವಾಣಿಯ ಮಾತುಗಳು ಬುದ್ಧಿವಂತ ಮತ್ತು ವಿವೇಕಶಾಲಿ ಆಗುವನು ಎಂಬುದಕ್ಕೆ ಅಹ್ಮದಿಯೇತರರು ಇದಕ್ಕೆ ಸಾಕ್ಷಿ ಹೇಳುತ್ತಿದ್ದಾರೆ.

ನಂತರ, ಸಂಭಾಷಣೆಯನ್ನು ಮುಂದುವರೆಸಿದ ಅವರು ಹೇಳಿದರು: ಪಾಕಿಸ್ತಾನ ಮತ್ತು ಭಾರತದಲ್ಲಿ ಯಾವುದೇ ರಾಜಕೀಯ ಅಥವಾ ಧಾರ್ಮಿಕ ನಾಯಕರನ್ನು ನಾನು ಮಿರ್ಝಾ ಸಾಹಿಬ್ ಅವರ ಮನಸ್ಸಿನಂತೆ ಪ್ರಾಯೋಗಿಕ ರಾಜಕೀಯದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದು ನೋಡಲಿಲ್ಲ. ನಿಸ್ವಾರ್ಥ ಸಲಹೆ, ಸ್ಪಷ್ಟ ಸಲಹೆ ಮತ್ತು ನಂತರ ಸರಿಯಾದ ಮಾರ್ಗದಲ್ಲಿ ಕ್ರಿಯಾ ಯೋಜನೆ ಅವರ ವಿಶೇಷತೆಯಾಗಿತ್ತು. ಅವರ ನಿಧನದಿಂದ ನಾನು ತೀವ್ರ ಆಘಾತಕ್ಕೊಳಗಾಗಿದ್ದೇನೆ. ಅವರು ಹೇಳಿದರು, ನಾನು ಇಸ್ಮಾಯಿಲ್ ಸಾಹಿಬ್ ಪಾಣಿಪತಿಯವರಿಗೆ ಸಂತಾಪ ಸೂಚಕ ಪತ್ರವನ್ನು ಕಳುಹಿಸಿದ್ದೇನೆ. ಹಝ್ರತ್ ಸಾಹಿಬ್ ಅವರಿಗೆ ಸಂಬಂಧಿಸಿದ ಸಂತಾಪ ವಾಕ್ಯಗಳನ್ನು ಸಹ ಪ್ರಕಟಿಸಬಹುದು ಎಂದು ಈ ಪತ್ರದಲ್ಲಿ ಬರೆಯಲಾಗಿದೆ.

ಆದರೆ ದೌರ್ಭಾಗ್ಯವಶಾತ್ ಮುಸ್ಲಿಮರು ಮಿರ್ಝಾ ಸಾಹಿಬ್(ರ)ರಿಗೆ ನೀಡಬೇಕಾದ ಬೆಲೆಯನ್ನು ನೀಡಲಿಲ್ಲ. ಕಠಿಣವಾದ ವಿರೋಧದ ಬಿರುಗಾಳಿ ಇದ್ದೂ ನಾನು ಮಿರ್ಝಾ ಸಾಹಿಬ್(ರ)ರನ್ನು ಎಂದಿಗೂ ದುಃಖಿತರಾಗಿ ಮತ್ತು ಉತ್ಸಾಹರಹಿತರಾಗಿ ಕಂಡಿಲ್ಲ. ಮಿರ್ಝಾ ಸಾಹೇಬರ ಹೃದಯದ ಮೇಣದ ಬತ್ತಿ ಯಾವಾಗಲೂ ಪ್ರಕಾಶಮಾನವಾಗಿತ್ತು.

ನಾವು ಹತಾಶೆ ಮತ್ತು ಖಿನ್ನತೆಯ ಚಿತ್ರಣದಲ್ಲಿ ಅವರನ್ನು ಭೇಟಿಯಾಗಲು ಹೋಗುತ್ತಿದ್ದೆವು ಮತ್ತು ನಾವು ಹೊರಬಂದಾಗ, ಹತಾಶತೆಯ ಮೋಡಗಳು ಮೇಲಕ್ಕೆತ್ತಿ, ಗುರಿಯಲ್ಲಿ ಯಶಸ್ಸು ನಮ್ಮ ಮುಂದೆ ಗೋಚರಿಸುತ್ತಿತ್ತು. ಅವರು ಭಾರವಾದ ವಾದಗಳನ್ನು ಮತ್ತು ಪ್ರಾಯೋಗಿಕ ಮಾತುಗಳನ್ನು ಆಡುತ್ತಿದ್ದರು ಮತ್ತು ನಂತರ, ಅವರು ತ್ಯಾಗ ಮತ್ತು ಎಲ್ಲಾ ರೀತಿಯ ಸಹಕಾರವನ್ನು ಸಹ ನೀಡುತ್ತಿದ್ದರು, ಅದು ನಮ್ಮಲ್ಲಿ ಧೈರ್ಯ ಮತ್ತು ಧೈರ್ಯದ ಭಾವನೆಗಳನ್ನು ತುಂಬುತ್ತಿತ್ತು.

('ಖಾಲಿದ್' ಮಾಸಿಕ ಪತ್ರಿಕೆ ಸೈಯದ್ನಾ ಮುಸ್ಲೆಹ್ ಮೌಊದ್ ವಿಶೇಷ ಸಂಚಿಕೆ, ಜೂನ್, ಜುಲೈ 2008, ಪುಟ-325-326 ರಿಂದ ಆಯ್ದುಕೊಳ್ಳಲಾಗಿದೆ)

"ಭಾಷೆಗಳ ಲೋಕದಲ್ಲಿ ಅರಬೀ ಭಾಷೆಯ ಸ್ಥಾನ" ಎಂಬ ವಿಷಯದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಭಾಷಣದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಲಾಲಾ ಭೀಮ್‌ಸೇನರ ಪುತ್ರ ಮತ್ತು ಕಾಶ್ಮೀರದ

ಮಾಜಿ ಚೀಫ್ ನ್ಯಾಯಾಧೀಶರಾದ ಸನ್ಮಾನ್ಯ ಕನ್‌ವರ್ ಸೇನ್ ಸಾಹಿಬ್‌ರು ತನ್ನ ಭಾಷಣದಲ್ಲಿ ಹೀಗೆ ಹೇಳಿದರು: ಇಂದು ಅರೇಬಿಕ್ ಭಾಷೆಯ ಶ್ರೇಷ್ಠತೆಯ ಬಗ್ಗೆ ಸಮರ್ಥ ಉಪನ್ಯಾಸಕರು ನೀಡಿದ ಆಸಕ್ತಿದಾಯಕ ಮತ್ತು ವಿವಾದಾತ್ಮಕ ಭಾಷಣವನ್ನು ಕೇಳಲು ನನಗೆ ತುಂಬಾ ಸಂತೋಷವಾಯಿತು. ಮತ್ತು ಈ ಅರ್ಥದಲ್ಲಿ ನಾನು ನಿಮ್ಮೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಲು ಸಹ ಸಂತೋಷಪಡುತ್ತೇನೆ. ಹಾಗಾಗಿ ಅವರು ತಮ್ಮ ತಂದೆ ಮಾಜಿದ್ ಅವರಿಂದ ಅರೇಬಿಕ್ ಭಾಷೆಯನ್ನು ಕಲಿತರು. ಲಾಲಾ ಸಾಹಿಬ್ ಅವರ ತಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಂದ ಅರೇಬಿಕ್ ಭಾಷೆಯನ್ನು ಕಲಿತರು. ಅವರು ಹೇಳತ್ತಾರೆ: ನಾನು ಉಪನ್ಯಾಸವನ್ನು ಕೇಳಲು ಬಂದಾಗ, ಆ ಸಮಯದಲ್ಲಿ ನಾನು ವಿಷಯವನ್ನು ಹಳೆಯ ಕಾಲದ ಜನರು ವಿವರಿಸುವ ರೀತಿಯಲ್ಲಿ ವಿವರಿಸುತ್ತಾರೆ ಎಂದು ನಾನು ಭಾವಿಸಿದೆ. ಅರೇಬಿಕ್ ಭಾಷೆಯ ಶ್ರೇಷ್ಠತೆಗೆ ಕಾರಣವೇನು ಎಂದು ಅರಬ್ಬರನ್ನು ಒಮ್ಮೆ ಕೇಳಿದರೆ, ಅದರ ಶ್ರೇಷ್ಠತೆಗೆ ಮೂರು ಕಾರಣಗಳಿವೆ ಎಂದು ಅವರು ಹೇಳಿದರು, ಅದರಲ್ಲಿ ಮೊದಲನೆಯದು ನಾನು ಅರೇಬಿಯಾ ಮೂಲದವನು. ಇದು ಅರೇಬಿಕ್‌ನ ಶ್ರೇಷ್ಠತೆ. ಎರಡನೆಯದು ಅದು ಪವಿತ್ರ ಖುರ್‌ಆನ್‌ನ ಭಾಷೆಯಾಗಿದೆ. ಅದನ್ನು ನಂಬೋಣ. ಮೂರನೆಯದಾಗಿ, ಏಕೆಂದರೆ ಸ್ವರ್ಗದಲ್ಲಿ ಅರೇಬಿಕ್ ಮಾತನಾಡುತ್ತಾರೆ. ಬಹುಶಃ ಅಂತಹ ವಿಷಯಗಳನ್ನು ಅರೇಬಿಕ್ ಭಾಷೆಯ ಶ್ರೇಷ್ಠತೆಯಲ್ಲಿ ಪ್ರಸ್ತುತಪಡಿಸಬಹುದು ಎಂದು ನಾನು ಭಾವಿಸಿದೆ ಎಂದು ಅವರು ಹೇಳುತ್ತಾರೆ, ಆದರೆ ನೀಡಿದ ಉಪನ್ಯಾಸವು ಅದರೊಳಗೆ ಬಹಳ ಪಾಂಡಿತ್ಯಪೂರ್ಣ ಮತ್ತು ತಾತ್ವಿಕ ವೈಭವವನ್ನು ಹೊಂದಿದೆ. ನಾನು ಗೌರವಾನ್ವಿತ ಮಿರ್ಝಾ ಸಾಹಿಬ್ ಅವರಿಗೆ ಭರವಸೆ ನೀಡುತ್ತೇನೆ, ಅವರ ಉಪನ್ಯಾಸದ ಪ್ರತಿಯೊಂದು ಉಚ್ಚಾರಾಂಶವನ್ನು ನಾನು ಸಂಪೂರ್ಣ ಗಮನ ಮತ್ತು ಸಂಪೂರ್ಣ ಪರಿಗಣನೆಯಿಂದ ಕೇಳಿದ್ದೇನೆ ಮತ್ತು ನಾನು ತುಂಬಾ ಆನಂದಿಸಿದ್ದೇನೆ ಮತ್ತು ಅದರಿಂದ ಪ್ರಯೋಜನ ಪಡೆದಿದ್ದೇನೆ. ಈ ಉಪನ್ಯಾಸದ ಪ್ರಭಾವ ನನ್ನ ಹೃದಯದಲ್ಲಿ ಚಿರಕಾಲ ಉಳಿಯಲಿ ಎಂದು ಹಾರೈಸುತ್ತೇನೆ. (ತಾರಿಖ್ ಅಹ್ಮದೀಯತ್, ಸಂಪುಟ–6, ಪುಟ–181)

ಭೌತಿಕ ವಿದ್ಯಾಭ್ಯಾಸದ ಮಟ್ಟದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರೈಮರಿ ಕೂಡ ತೇರ್ಗಡೆ ಹೊಂದಿರಲಿಲ್ಲ. ಅಲ್ಲಾಹನು ವಾಗ್ದಾನ ಮಾಡಿದ ಜ್ಞಾನದಿಂದ ಅವರನ್ನು ಅಲ್ಲಾಹನು ತುಂಬಿಸಿದ್ದನು. ಅದರ ಬಗ್ಗೆ ಹೊಗಳದೇ ಇರಲು ಅನ್ಯರಿಂದಲೂ ಸಾಧ್ಯವಿರಲಿಲ್ಲ.

ಓರ್ವ ಅಮೇರಿಕನ್ ಪಾದ್ರಿಯ ಅಭಿಪ್ರಾಯವನ್ನು ಆಲಿಸಿರಿ. ಶೇಖ್ ಇಸ್ಮಾಈಲ್ ಸಾಹಿಬ್ ಪಾನೀಪತಿ ಹೇಳುತ್ತಾರೆ: ಮೌಲವಿ ಉಮರುದ್ದೀನ್ ಸಾಹಿಬ್ ಶಿಮ್ಲವಿ ಒಮ್ಮೆ ಒಂದು ಘಟನೆಯನ್ನು ವಿವರಿಸಿದರು. ಅವರು ಹೇಳುತ್ತಾರೆ: ಹಝ್ರತ್ ಮುಸ್ಲಿಹ್ ಮೌಊದ್(ರ) ಖಲೀಫರಾದ ಕೆಲವು ದಿನಗಳ ನಂತರ ಅಂದರೆ ಹುಝೂರ್ 1914ರಲ್ಲಿ ಕಲೀಫರಾದರು ಅದರ ಕೆಲವು ತಿಂಗಳ ನಂತರ ಅಮೇರಿಕದ ಒಬ್ಬ ಪಾದ್ರಿ ಖಾದಿಯಾನಿಗೆ ಬಂದರು. ಅವರು ಮಹಾನ್ ಧಾರ್ಮಿಕ ವಿದ್ವಾಂಸರಾಗಿದ್ದರು ಮತ್ತು ತಮ್ಮ ವಿಧ್ಯೆಯ ಬಗ್ಗೆ ಅವರು ಹೆಮ್ಮೆ ಟಡುತ್ತಿದ್ದರು. ಖಾದಿಯಾನ್‌ಗೆ ಆಗಮಿಸಿ ಅವರು ನಮ್ಮೊಂದಿಗೆ ಕೆಲವು ಮುಖ್ಯ ಧಾರ್ಮಿಕ ಪ್ರಶ್ನೆಗಳನ್ನು ಮುಂದಿರಿಸುತ್ತಾ ಹೀಗೆ ಹೇಳಿದರು: ನಾನು ಅಮೆರಿಕದಿಂದ ಇಲ್ಲಿಗೆ ಬಂದಿದ್ದೇನೆ ಮತ್ತು ನಾನು ಮುಸ್ಲಿಮರ ಪ್ರತಿ ಸಭೆಯಲ್ಲೂ ಈ ಪ್ರಶ್ನೆಗಳನ್ನು ಪುನರಾವರ್ತಿಸ್ಸಿದ್ದೇನೆ ಆದರೆ ಇಂದಿನವರೆಗೂ, ಮುಸ್ಲಿಮರ ಅತ್ಯಂತ ದೊಡ್ಡ ಪಂಡಿತರು ಮತ್ತು ವಿದ್ವಾಂಸರು ಕೂಡ ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಇಂದಿನ ತನಕ ನನಗೆ ನೀಡಿಲ್ಲ. ನಾನು ಈ ಪ್ರಶ್ನೆಗಳನ್ನು ನಿಮ್ಮ ಖಲೀಫ ಸಾಹಿಬ್‌ರ ಸನ್ನಿಧಿಯಲ್ಲಿ ಮುಂದಿರಿಸಲಿಕ್ಕಾಗಿ ವಿಶೇಷವಾಗಿ ಬಂದಿದ್ದೇನೆ. ನಿಮ್ಮ ಖಲೀಫಾ ಈ ಪ್ರಶ್ನೆಗಳಿಗೆ ಹೇಗೆ ಉತ್ತರಿಸುತ್ತಾರೆ ಎಂಬುದನ್ನು ನೋಡೋಣ. ವಿರದಿಗಾರರು ಹೇಳುವ ಪ್ರಕಾರ ಪ್ರಶ್ನೆಗಳು ತುಂಬಾ ಸಂಕೀರ್ಣ ಮತ್ತು ವಿಚಿತ್ರವಾಗಿದ್ದವು, ಅವುಗಳನ್ನು ಕೇಳಿದಾಗ ಹಝ್ರತ್ ಸಾಹಿಬ್ ಇನ್ನೂ ಚಿಕ್ಕವರಾಗಿದ್ದಾರೆ ಮತ್ತು ಯಾವುದೇ ಔಪಚಾರಿಕ ಧರ್ಮಶಾಸ್ತ್ರದ ಶಿಕ್ಷಣವನ್ನು ಸಹ ಪಡೆದಿಲ್ಲ ಎಂದು ನಾನು ಭಾವಿಸಿದೆ. ವಯಸ್ಸು ತುಂಬಾ ಚಿಕ್ಕದಾಗಿದೆ ಮತ್ತು ಪರಿಚಯವು ತುಂಬಾ ಕಡಿಮೆಯಾಗಿದೆ, ಅವರು ಈ ಪ್ರಶ್ನೆಗಳಿಗೆ ಎಂದಿಗೂ ಉತ್ತರಿಸಲು ಸಾಧ್ಯವಾಗುವುದಿಲ್ಲ ಮತ್ತು ಹೀಗಾಗಿ ಅಹ್ಮದೀಯರ ಸರಪಳಿಯು ಇಡೀ ಜಗತ್ತಿನಲ್ಲಿ ಅಪಖ್ಯಾತಿಗೊಳಗಾಗುತ್ತದೆ ಮತ್ತು ಕಳೆದುಹೋಗುತ್ತದೆ ಏಕೆಂದರೆ ಹಝ್ರತ್ ಸಾಹಿಬ್ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದಿದ್ದಾಗ, ಈ ಅಮೇರಿಕನ್ ಪಾದ್ರಿ ಅಹ್ಮದೀಯರ ಖಲೀಫರಿಗೆ ಏನೂ ತಿಳಿದಿಲ್ಲ ಮತ್ತು ಕ್ರಿಶ್ಚಿಯನ್ ಧರ್ಮದ ವಿರುದ್ಧ ನಿಲ್ಲಲು ಸಾಧ್ಯವಿಲ್ಲ ಎಂದು ಅವನು ಹಿಂತಿರುಗಿ ಇಡೀ ಜಗತ್ತಿಗೆ ಅವರು(ಖಲೀಫರು) ಹೆಸರಿಗೆ ಮಾತ್ರ ಖಲೀಫ, ಇಲ್ಲದಿದ್ದರೆ ಅವರಿಗೆ ಜ್ಞಾನವೂ ಇಲ್ಲ ಎಂದು ಪ್ರಚಾರ ಮಾಡುತ್ತಾನೆ. ಈ ಪರಿಸ್ಥಿತಿಯಿಂದ ನಾನು ತುಂಬಾ ವಿಚಲಿತನಾಗಿದ್ದೆ ಎಂದು ಅವರು ಹೇಳುತ್ತಾರೆ. ನಾನು ಅವರನ್ನು ಅಮೆರಿಕಾದ ಪಾದ್ರಿ ಹಝ್ರತ್ ಸಾಹಿಬರನ್ನು ಭೇಟಿಯಾಗದಂತೆ ತಡೆಯಲು ಮತ್ತು ಹಾಗೆ ಹಿಂತಿರುಗಲು ಪ್ರಯತ್ನಿಸಿದೆ, ಆದರೆ ನಾನು ಈ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಖಲೀಫಾರನ್ನು ಭೇಟಿಯಾಗಲು ನಾನು ಖಂಡಿತವಾಗಿಯೂ ಹೋಗುತ್ತೇನೆ ಎಂದು ಅಮೇರಿಕನ್ ಒತ್ತಾಯಿಸಿದನು. ದುರದೃಷ್ಟವಶಾತ್, ನಾನು ಹೋಗಿ ಹಝ್ರತ್ ಸಾಹಿಬರಿಗೆ ಅಮೇರಿಕನ್ ಪಾದ್ರಿಯೊಬ್ಬರು ಬಂದಿದ್ದಾರೆಂದು ತಿಳಿಸಿದೆ. ಆತನು ನಿಮ್ಮೊಂದಿಗೆ ಕೆಲವು ಪ್ರಶ್ನೆಗಳನ್ನು ಕೇಳಲು ಬಯಸುತ್ತಿದ್ದಾನೆ. ಈಗ ಏನು ಮಾಡುವುದು? ಈ ಬಗ್ಗೆ ಹಝ್ರತ್ ಸಾಹಿಬ್ ಅವರು ವಿರಾಮವಿಲ್ಲದೆ ಮತ್ತು ಹಿಂಜರಿಕೆಯಿಲ್ಲದೆ ಅವರನ್ನು ಕರೆಯಿರಿ ಎಂದು ಹೇಳಿದರು. ದುರದೃಷ್ಟವಶಾತ್, ನಾನು ಅವರನ್ನು ಕರೆತಂದೆನು. ಹಝ್ರತ್ ಸಾಹಿಬರ ಸೇವೆಯಲ್ಲಿ ಹಾಜರಾದನು. ಅವರಿಬ್ಬರ ನಡುವೆ ನಾನು ಒಬ್ಬ ಇದ್ದೆ ಎಂದು ವರದಿಗರರು ಹೇಳುತ್ತಾರೆ. ಅವರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಹುಝೂರ್(ರ) ಉರ್ದುವಿನಲ್ಲಿ ಉತ್ತರಿಸುತ್ತಿದ್ದರು ಅದನ್ನು ಇವರು ಆಂಗ್ಲ ಭಾಷೆಯಲ್ಲಿ ತರ್ಜುಮೆ ಮಾಡುತ್ತಿದ್ದರು. ಅವರು ಹೇಳುತ್ತಾರೆ: ಕೆಲವು ಔಪಚಾರಿಕ ಸಂಭಾಷಣೆಯ ನಂತರ, ಅಮೇರಿಕನ್ ಪಾದ್ರಿ ಹಝ್ರತ್ ಸಾಹಿಬ್ ಅವರಿಗೆ ತಮ್ಮ ಪ್ರಶ್ನೆಗಳನ್ನು ಮಂಡಿಸಿದರು. ಅದರ ಅನುವಾದವನ್ನು ನಾನು ನಿಮಗೆ ವಿವರಿಸಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅತ್ಯಂತ ಸಮಾಧಾನದಿಂದ ಈ ಎಲ್ಲ ಪ್ರಶ್ನೆಗಳನ್ನು ಆಲಿಸಿದರು ಮತ್ತು ಅವುಗಳಿಗೆ ಎಂತಹ ತೃಪ್ತಿಕರವಾದ ಉತ್ತರಗಳನ್ನು ನೀಡಿದರು. ನಾನು ಆ ಉತ್ತರಗಳನ್ನು ಆಲಿಸಿದ ನಂತರ ನನಗೆ ಆಶ್ಚರ್ಯಚಕಿತನಾದೆ. ಈ ಪ್ರಶ್ನೆಗಳಿಗೆ ಹಝ್ರತ್ ಸಾಹಿಬ್ ಅವರು ಅಂತಹ ತಿಳುವಳಿಕೆಯುಳ್ಳ ಮತ್ತು ಸೌಮ್ಯವಾದ ಉತ್ತರಗಳನ್ನು ನೀಡಲು ಸಾಧ್ಯವಾಗುತ್ತದೆ ಎಂದು ನನಗೆ ಖಚಿತವಾಗಿರಲಿಲ್ಲ. ನಾನು ಈ ಉತ್ತರಗಳನ್ನು ಅಮೆರಿಕನ್ ಪಾದ್ರಿಗೆ ಇಂಗ್ಲಿಷ್‌ನಲ್ಲಿ ಅನುವಾದಿಸಿದಾಗ, ಅವರೂ ಆಶ್ಚರ್ಯಚಕಿತರಾಗಿ ಹೀಗೆ ಹೇಳಿದರು: ನಾನು ಇಂದಿನ ತನಕ ಇಂತಹ ವಿವೇಕಯುತ ಮಾತುಕತೆ ಮತ್ತು ಇಂತಹ ಸಮರ್ಥ ಭಾಷಣವನ್ನು ಯಾವನೇ ಮುಸ್ಲಿಮನ ಬಾಯಿಯಿಂದ ಆಲಿಸಿಲ್ಲ. ನಿಮ್ಮ ಖಲೀಫರು ಬಹಳ ಶ್ರೇಷ್ಠ ವಿದ್ವಾನ್ ಎಂದು ತೋರುತ್ತದೆ. ಧಾರ್ಮಿಕ ಲೋಕದ ಮೇಲೆ ಅವರಿಗೆ ಆಳವಾದ ದೃಷ್ಟಿಯಿದೆ. ಹೀಗೆ ಹೇಳಿ ಪಾದ್ರಿ ಬಹಳ ಆದರದಿಂದ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಕೈಯನ್ನು ಚುಂಬಿಸಿ ಮರಳಿ ಹೋದರು. (ತಾರಿಖ್ ಅಹ್ಮದೀಯತ್, ಸಂಪುಟ–4, ಪುಟಗಳು 163–164)

ಇದು ಭವಿಷ್ಯವಾಣಿಯ ನೆರವೇರಿಕೆಯ ವೈಭವ ಇದಾಗಿದೆ. ವಿಜ್ಞಾನದಲ್ಲಿ ಪರಿಣಿತನೆಂದು ಪರಿಗಣಿಸಿದ ಒಬ್ಬ ಪಾದ್ರಿಯೂ ಇಸ್ಲಾಮಿನ ಶ್ರೇಷ್ಠತೆಯನ್ನು ಮನಗಂಡನು.

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಪುಸ್ತಕವಿದೆ, "ನೆಹರು ರಿಪೋರ್ಟ್ ಔರ್ ಮುಸಲ್ಮಾನೊಂ ಕೇ ಮಸಾಲೆಹ್" (ನೆಹರು ವರದಿ ಮತ್ತು ಮುಸ್ಲಿಮರ ಹಿತಾಸಕ್ತಿಗಳು) ಅದರ ಬಗ್ಗೆ ಒಬ್ಬ ವ್ಯಾಖ್ಯಾನಕಾರರು ಬರೆದಿದ್ದಾರೆ: "ಹುಝೂರ್‌ರವರ ಈ ಸಮಯೋಚಿತ ಮಾರ್ಗದರ್ಶನಕ್ಕಾಗಿ ಮುಸ್ಲಿಮರ ಉನ್ನತ ವರ್ಗವು ತುಂಬಾ ಕೃತಜ್ಞರಾಗಿದ್ದಾರೆ ಮತ್ತು ಮುಸ್ಲಿಮರ ರಜಕೀಯ ವಲಯದಲ್ಲಿ ಅದು ಬಹಳ ಮೆಚ್ಚುಗೆ ಪಡೆದಿದೆ ಮತ್ತು ದೊಡ್ಡ ಮುಸ್ಲಿಂ ನಾಯಕರು ಅವರನ್ನು ಮೆಚ್ಚುಗೆಯ ಮಾತುಗಳಲ್ಲಿ ಶ್ಲಾಘಿಸಿದರು ಮತ್ತು ಹಝ್ರತ್ ಇಮಾಮ್ ಸಾಹಿಬ್ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅವರು ಮುಸ್ಲಿಮರಿಗೆ ಅವರ ಅತ್ಯಂತ ಅಗತ್ಯದ ಸಮಯದಲ್ಲಿ ಸಹಾಯ ಮಾಡಿದ್ದಾರೆ ಎಂದು ಅವರಿಗೆ ಧನ್ಯವಾದವನ್ನು ಅರ್ಪಿಸಿದರು. ಅನೇಕ ಸಹಾಬಿಗಳು ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಅವರಿಗೆ ಹೇಳಿದರು, "ನಿಜವಾದ ಮತ್ತು ಪ್ರಾಯೋಗಿಕ ಕೆಲಸವನ್ನು ನಿಮ್ಮ ಜಮಾಅತ್ ಮಾತ್ರ ಮಾಡುತ್ತಿದೆ ಮತ್ತು ನಿಮ್ಮ ಜಮಾತ್‌ನಲ್ಲಿರುವ ಸಂಸ್ಥೆಯು ಬೇರೆಲ್ಲಿಯೂ ಕಂಡುಬರುವುದಿಲ್ಲ." ಕಲ್ಕತ್ತದ ನಿಷ್ಠಾವಂತ ಅಹ್ಮದಿ ಮಿಸ್ಟರ್ ದೌಲತ್ ಅಹ್ಮದ್ ಖಾನ್ ಸಾಹಿಬ್ BA, LLB, ದೈತ್ಯ ಸಂಪಾದಕ ಪತ್ರಿಕೆ 'ಸುಲ್ತಾನ್' ಇದರ ವ್ಯಾಖ್ಯಾನವನ್ನು ಬಂಗಾಳಿ ಭಾಷೆಗೆ ಅನುವಾದಿಸಿ ಅದನ್ನು ಒಂದು ಸುಂದರವಾದ ಪುಟ್ಟ ಪುಸ್ತಕದಲ್ಲಿ ಪ್ರಕಟಿಸಿದರು ಮತ್ತು ಇದು ಬಂಗಾಳದ ಜನರಲ್ಲಿ ಬಹಳ ಜನಪ್ರಿಯವಾಯಿತು. ಉನ್ನತ ಶಿಕ್ಷಣ ಪಡೆದ ಅಹ್ಮದೀಯರಲ್ಲದವರು ನೆಹರೂ ವರದಿಯ ವ್ಯಾಖ್ಯಾನವನ್ನು ಓದಿದ ನಂತರ ಪ್ರಭಾವಿತರಾದರು, ಅವರು ಇಸ್ಲಾಮಿಕ್ ಅಭಿವೃದ್ಧಿ ಕಾರ್ಯದರ್ಶಿಗೆ ಪತ್ರ ಬರೆದರು. "ಹಝ್ರತ್ ಖಲೀಫಾ ಸಾಹಿಬ್ ಅವರನ್ನು ನೋಡಲು ಮತ್ತು ಅವರನ್ನು ಭೇಟಿ ಮಾಡಲು ನಾನು ತುಂಬಾ ಉತ್ಸಾಹದಲ್ಲಿದ್ದೇನೆ ಏಕೆಂದರೆ ಅವರು ನನ್ನ ಹೃದಯದಲ್ಲಿ ಬಹಳ ಮುಖ್ಯರಾಗಿದ್ದಾರೆ ... ದಯವಿಟ್ಟು ಹಝ್ರತ್ ಸಾಹಿಬ್ ಅವರ ಸೇವೆಯಲ್ಲಿ

ಈ ವಿನೀತನ ಸಲಾಮ್ ಅನ್ನು ಅರ್ಪಿಸಿ ಮತ್ತು ಈ ಸೇವಕನ ಕಡೆಯಿಂದ ಸತ್ಯಾನ್ವೇಷಣೆಗಾಗಿ ಅಭಿನಂದನೆಗಳನ್ನು ತಿಳಿಸಿರಿ ಅವರು ಇಂತಹ ಅಪಾಯಕಾರಿ ಪರಿಸ್ಥಿತಿಯಲ್ಲಿ ನೀವು ಇಸ್ಲಾಂ ಧರ್ಮವನ್ನು ಉಳಿಸುತ್ತಿದ್ದೀರಿ ಮತ್ತು ಧಾರ್ಮಿಕ ಮಾಹಿತಿ ನೀಡುವುದು ಮಾತ್ರವಲ್ಲದೆ ರಾಜಕೀಯ ವಿಷಯಗಳಲ್ಲಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡುತ್ತಿದ್ದೀರಿ. ನಾನು ನೆಹರೂ ವರದಿಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಾನು ಓದಿದ್ದೇನೆ, ಅದು ನನ್ನ ದೃಷ್ಟಿಯಲ್ಲಿ ನಿಮ್ಮ ಮೌಲ್ಯವನ್ನು ಹೆಚ್ಚಿಸಿದೆ ಮತ್ತು ನಾನು ನಿಮ್ಮನ್ನು ಶ್ರೇಷ್ಠ ಧಾರ್ಮಿಕ ವಿದ್ವಾಂಸ ಮತ್ತು ನುರಿತ ರಾಜಕಾರಣಿ ಎಂದು ಪರಿಗಣಿಸಿದ್ದೇನೆ." (ತಾರೀಖೆ ಅಹ್ಮದಿಯತ್, ಸಂಪುಟ-5, ಪುಟಗಳು 71-72)

ಸಿಯಾಸತ್ ಪತ್ರಿಕೆಯನ್ನು ಲಾಹೋರ್‌ನಿಂದ ಪ್ರಕಟಿಸಲಾಗುತ್ತಿತ್ತು. ಡಿಸೆಂಬರ್ 2, 1930 ರಂದು ಅವರು ಬರೆದಿದ್ದಾರೆ, "ಧಾರ್ಮಿಕ ಭಿನ್ನಾಭಿಪ್ರಾಯದ ಮಾತನ್ನು ಬಿಟ್ಟುಕೊಂಡು ನೋಡುವುದಾದರೆ ಲೇಖನ ಮತ್ತು ಗ್ರಂಥ ರಚನೆಯಲ್ಲಿ ಜನಾಬ್ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ) ಮಾಡಿದ ಕಾರ್ಯವು ಗಾತ್ರದ ದೃಷ್ಟಿಯಲ್ಲೂ ಉಪಯುಕ್ತತೆಯ ದೃಷ್ಟಿಯುಲ್ಲೂ ಶ್ಲಾಘನೀಯುವಾಗಿದೆ. ಸಾಮಾನ್ಯ ಮುಸ್ಲಿಮರನ್ನು ಜೊತೆಜೊತೆಯಲ್ಲಿ ನಡೆಸುವಲ್ಲಿ ನಿಮ್ಮ ನಾಯಕತ್ವದಲ್ಲಿ ನೀವು ಪ್ರಾರಂಭಿಸಿದ ಮತ್ತು ಯಶಸ್ವಿಗೊಳಿಸಿದ ಕಾರ್ಯದ ತತ್ವವು ಪ್ರತಿಯೊಬ್ಬ ನ್ಯಾಯಯುತ ಮನಸ್ಸಿನ ಮುಸ್ಲಿಂ ಮತ್ತು ನೀತಿವಂತರಿಂದ ಗೌರವವನ್ನು ಪಡೆಯುತ್ತಿದೆ.

ನಿಮ್ಮ(ರ) ರಾಜಕೀಯ ತೀಕ್ಷ್ಣಗ್ರಹಿಕೆಯ ಬಗ್ಗೆ ಒಂದು ಕಾಲಘಟ್ಟವೆ ಸಮ್ಮತಿಸುತ್ತದೆ ಮತ್ತು ನೆಹರೂ ರಿಪೋರ್ಟ್‌ನ ವಿರುದ್ಧ ಮುಸ್ಲಿಮರನ್ನು ಒಗ್ಗೂಡಿಸುವಲ್ಲಿ, ಸೈಮನ್ ಕಮೀಶನ್‌ನ ಮುಂದೆ ಮುಸ್ಲಿಮರ ದೃಷ್ಟಿಕೋನವನ್ನು ಪ್ರಸ್ತುತಪಡಿಸುವಲ್ಲಿ, ಪ್ರಸ್ತುತ ಸಮಸ್ಯೆಗಳನ್ನು ಇಸ್ಲಾಮಿಕ್ ದೃಷ್ಟಿಕೋನದಿಂದ ಚರ್ಚಿಸುವಲ್ಲಿ ಮತ್ತು ಪೂರ್ಣ ಪುಸ್ತಕಗಳನ್ನು ಪ್ರಕಟಿಸುವಲ್ಲಿ ಅವರ ರಾಜಕೀಯು ಬುದ್ಧಿವಂತಿಕೆಯು ದೀರ್ಘಕಾಲದವರೆಗೆ ಮನವರಿಕೆಯಾಗಿದೆ. ಮುಸ್ಲಿಮರ ಹಕ್ಕುಗಳಿಗಾಗಿ ವಾದಗಳು "ಅಂದರೆ, ವಾದಗಳಿಂದ ತುಂಬಿದ ಪುಸ್ತಕಗಳನ್ನು ಪ್ರಕಟಿಸುವ ಸಂದರ್ಭದಲ್ಲಿ" ನೀವು ತುಂಬಾ ಶ್ಲಾಘನೀಯ ಕೆಲಸ ಮಾಡಿದ್ದೀರಿ. ವರ್ವೆಯಲ್ಲಿರುವ ಪುಸ್ತಕ ಸೈಮನ್ ವರದಿಯ ಬಗ್ಗೆ ನಿಮ್ಮ ಟೀಕೆಯಾಗಿದೆ, ಇದನ್ನು ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ, ಅದನ್ನು ಓದುವುದು ನಿಮ್ಮ ಜ್ಞಾನದ ವಿಸ್ತಾರವನ್ನು ತೋರಿಸುತ್ತದೆ. ನಿಮ್ಮ ಪ್ರಸ್ತುತಿ ಶೈಲಿಯು ಮೃದು ಮತ್ತು ಮನವೊಲಿಸುವಂತಿದೆ. ನಿಮ್ಮ ಭಾಷೆ ತುಂಬಾ ಅಚ್ಚುಕಟ್ಟಾಗಿದೆ."
(ತಾರೀಖೆ ಅಹ್ಮದೀಯತ್, ಸಂಪುಟ-5, ಪುಟ-219)

ಇರಾಖ್‌ನ ಪರಿಸ್ಥಿತಿಯ ಕುರಿತು ಆಲ್ ಇಂಡಿಯಾ ರೇಡಿಯೋ ಸ್ಟೇಷನ್ ಲಾಹೋರ್‌ನಿಂದ ಹಝ್ರತ್ ಮುಸ್ಲೆಹ್ ಮೌಊದ್(ರ)ರವರು ಭಾಷಣವನ್ನು ನೀಡಿದರು ಅದನ್ನು ಅದನ್ನು ಆಲ್ ಇಂಡಿಯಾ ರೇಡಿಯೋ ಸ್ಟೇಷನ್ ಲಾಹೋರ್‌ನಿಂದ 25 ಮೇ 1941 ರಂದು ಪ್ರಸಾರ ಮಾಡಿತು. ಅದರ ಬಗ್ಗೆ ಒಂದು ಅಭಿಪ್ರಾಯವಿದೆ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಜರ್ಮನಿ ಮತ್ತು ಇಟಲಿಯಿಂದ ಇರಾಕ್ ಆಕ್ರಮಣವು ಈ ಭಾಷಣದ ಪ್ರೇರಣೆಯಾಗಿದೆ. ದೆಹಲಿಯ ಪ್ರಸಿದ್ಧ ಸಿಖ್ ಪತ್ರಿಕೆ ರಿಯಾಸತ್ ಜೂನ್ 2, 1941 ರಂದು ಈ ಕೆಳಗಿನಂತೆ ವಿಮರ್ಶೆ ಮಾಡಿದೆ.

"ಗುಲಾಮ ಸಮುದಾಯಗಳು ಮತ್ತು ಗುಲಾಮ ರಾಷ್ಟ್ರಗಳ ಪಾತ್ರದ ದುರ್ಬಲ ಅಂಶವೆಂದರೆ ಅವರ ಜನರು ನೈತಿಕ ಸತ್ಯಾಂಶ ಮತ್ತು ಧೈರ್ಯದಿಂದ ವಂಚಿತರಾಗುತ್ತಾರೆ ಮತ್ತು ಸ್ತೋತ್ರ, ಸುಳ್ಳು, ಮುಖಸ್ತುತಿ ಮತ್ತು ಹೇಡಿತನದ ಮನೋಭಾವವು ಅವರಲ್ಲಿ ಎದ್ದು ಕಾಣುತ್ತದೆ." ಉದಾಹರಣೆ ನೀಡುತ್ತಾನೆ "ಇರಾಖ್‌ನ ರಶೀದ್ ಅಲಿ ಬ್ರಿಟಿಷ್ ಸರ್ಕಾರ ಅಥವಾ ಬ್ರಿಟಿಷ್ ಪ್ರಜೆಗಳ ದೃಷ್ಟಿಕೋನದಿಂದ ತಪ್ಪಾಗಿರಬಹುದು ಅಥವಾ ಬ್ರಿಟನ್ ವಿರುದ್ಧ ಹೋರಾಡುವುದು ಅವರಿಗೆ ಸೂಕ್ತವಲ್ಲ, ಆದರೆ ಈ ವ್ಯಕ್ತಿಯು ತನ್ನ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾನೆ ಎಂದು ನಿರಾಕರಿಸಲಾಗುವುದಿಲ್ಲ ಮತ್ತು ಅವನನ್ನು ಯಾವುದೇ ಕಾರಣಕ್ಕಾಗಿ ಅವನ ದೇಶಕ್ಕೆ ದೇಶದ್ರೋಹಿ ಎಂದು ಕರೆಯಲಾಗುವುದಿಲ್ಲ. ಆದರೆ ಇರಾಕ್ ಗವರ್ನರ್ ಬಗ್ಗೆ ಮಾತನಾಡುವ ನಮ್ಮ ಗುಲಾಮ ದೇಶದ ಗವರ್ನರ್‌ಗಳು ಮತ್ತು ನಾಯಕರ ಪಾತ್ರವನ್ನು ನೋಡಿ. ರಶೀದ್ ಅಲಿಯನ್ನು ದೇಶದ್ರೋಹಿ ಎಂದು ಕರೆಯುತ್ತಿದ್ದಾರೆ. ಮತ್ತು ಯುದ್ಧದ ಬಗ್ಗೆ ಹೇಳಿಕೆ ನೀಡುವ ನಾಯಕ, ಮೊದಲನೆಯದಾಗಿ, ಅವರು ರಶೀದ್ ಅಲಿಯನ್ನು ದೇಶದ್ರೋಹಿ ಎಂದು ಕರೆದರು ಮತ್ತು ನಂತರ ಅವನು ತಮ್ಮ ಹೇಳಿಕೆಯನ್ನು ಪ್ರಾರಂಭಿಸುತ್ತಾನೆ ಮತ್ತು ಆ ಗವರ್ನರ್‌ಗಳು ಹಾಗೂ ನಾಯಕರ ಗುಣಲಕ್ಷಣವು ಅಂದರೆ ಈ ಮುಸ್ಲಿಮರ ಅಥವಾ ಭರತೀಯರನ್ನು ಸೇರಿ ಕೆಲವು ಅನ್ಯ ನಾಯಕರ ಗುಣಲಕ್ಷಣವು ಗುಲಾಮಗಿರಿಯ ಕಾರಣದಿಂದ ಎಷ್ಟು ಕೆಳಮಟ್ಟಕ್ಕಿಳಿದಿದೆ ಎಂದರೆ ಅವರು ಸುಳ್ಳು ಸ್ತೋತ್ರ ಮತ್ತು ಮುಖಸ್ತುತಿಯನ್ನು ದೇಶ ಅಥವಾ ಸರ್ಕಾರಕ್ಕೆ ಸೇವೆ ಎಂದು ಪರಿಗಣಿಸುತ್ತಿದ್ದಾರೆ. ನಮ್ಮ ರಾಜ್ಯದ ಗವರ್ನರ್‌ಗಳು ಮತ್ತು ನಾಯಕರ ಈ ಮೂರ್ಖ ಸ್ತೋತ್ರದ ಸಮ್ಮುಖದಲ್ಲಿ, ಖಾದಿಯಾನ್‌ನ ಅಹ್ಮದೀಯ ಜಮಾತ್‌ನ ಖಲೀಫರ ನೈತಿಕ ಧೈರ್ಯವು ಅವರ ಉನ್ನತ ಗುಣ ಮತ್ತು ಅವರ ವಾಕ್ಚಾತುರ್ಯ ಮತ್ತು ಸಂತೋಷದಿಂದ ಕಳೆದ ವಾರ ನಿಮ್ಮ ರೇಡಿಯೊ ಪ್ರಸಾರವೊಂದರಲ್ಲಿ ವ್ಯಕ್ತಪಡಿಸಿದ ಅನುಭವವನ್ನು ಅನುಭವಿಸುತ್ತದೆ." (ತಾರೀಖ್ ಅಹ್ಮದೀಯತ್, ಸಂಪುಟ-8, ಪುಟಗಳು 239 ರಿಂದ 244) ಇದು ಸಮುದಾಯವನ್ನು ಸೆರೆಯಿಂದ ಮುಕ್ತಗೊಳಿಸಲು ನಿಮ್ಮ ಪ್ರಯತ್ನವಾಗಿದೆ.

ಮೌಲಾನಾ ಮುಹಮ್ಮದ್ ಅಲಿ ಜೋಹರ್ ಸಾಹಿಬ್. ಅವರು ರಾಮ್‌ಪುರದಲ್ಲಿ 1878 ರಲ್ಲಿ ಜನಿಸಿದರು. ಅವರು 1931 ರಲ್ಲಿ ನಿಧನರಾದರು. ಅವರು ಕಲ್ಕತ್ತಾದಿಂದ ಕಾಮ್ರೇಡ್ ಎಂಬ ವಾರಪತ್ರಿಕೆಯನ್ನು ಪ್ರಕಟಿಸಿದರು. ಅವರು ದೆಹಲಿಯಲ್ಲಿ ಉರ್ದುವಿನಲ್ಲಿ ಹಮ್ದರ್ದ್ ಎಂಬ ಪತ್ರಿಕೆಯನ್ನೂ ಪ್ರಕಟಿಸಿದರು. 1923 ರಲ್ಲಿ ಅವರನ್ನು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್‌ಗೆ ತೆರಳಿದ್ದರು. ಅಲ್ಲಿ ಅವರು ಜನವರಿ 4, 1931 ರಂದು ನಿಧನರಾದರು. (ಮೌಲಾನಾ ಮುಹಮ್ಮದ್ ಅಲೀ ಜೋಹರ್ (ಹಯಾತ್ ವ ಖಿದ್ಮಾತ್, ಡಾ. ನದೀಮ್ ಶಫೀಕ್ ಮಲಿಕ್, ಪುಟಗಳು 15, 30 ರಿಂದ 33, 41 ರಿಂದ 45, 48)

**(ಮುಂದುವರಿಯುವುದು)**

---

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅವನನ್ನು ವಂಚಿತನಾಗಿಸುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ರಮಝಾನ್ ಮಾಸದಲ್ಲಿ ರೋಗಗ್ರಸ್ತನಾದರೆ ಅವನ ಆ ರೋಗವು ಅವನಿಗಾಗಿ (ರಹ್ಮತ್) ಅನುಗ್ರಹವಾಗಿರುವುದು. ಏಕೆಂದರೆ ಪ್ರತಿಯೊಂದು ಕಾರ್ಯವು ನಿಯತ್ತಿನಲ್ಲಿ ಅವಲಂಬಿತವಾಗಿದೆ. ಆದ್ದರಿಂದ ಮೂಮಿನ್ ತನ್ನ ಅಸ್ತಿತ್ವದಿಂದ ತನ್ನನ್ನು ಅಲ್ಲಾಹನ ಮಾರ್ಗದಲ್ಲಿ ಧೈರ್ಯಶಾಲಿ ಎಂದು ಸಾಬಿತುಗೊಳಿಸಬೇಕು. ಯಾವ ವ್ಯಕ್ತಿಯು ಉಪವಾಸದಿಂದ ವಂಚಿತನಾಗಿರುತ್ತಾನೊ, ಆದರೆ ಅವನ ಮನಸ್ಸಿನಲ್ಲಿ ಆತನು ಆರೋಗ್ಯವಂತನಾಗಿರುತ್ತಿದರೆ ಅವನು ಸಹ ಉಪವಾಸಗಳನ್ನು ಅನುಷ್ಠಿಸುತ್ತಿದ್ದನು ಎಂಬ ನಿಯ್ಯತ್ ಹಾಗೂ ನೋವು ಇದ್ದರೆ ದೇವದೂತರು ಅವನಿಗಾಗಿ ಉಪವಾಸ ಮಾಡುತ್ತಾರೆ. ಅದಕ್ಕೆ ಶರತ್ತು ಏನೆಂದರೆ ಆತನು ನೆಪ ಮಾಡುವವನಾಗಬಾರದು ಹೀಗಿದ್ದಲ್ಲಿ ಸರ್ವಶಕ್ತನಾದ ಅಲ್ಲಾಹನು ಅವನಿಗೆ ಪ್ರತಿಫಲದಿಂದ ವಂಚಿತನಾಗಿರಿಸುವುದಿಲ್ಲ.

**(ಮಲ್‌ಫೂಝಾತ್, ಸಂಪುಟ-3, ಪುಟ-426, ಪ್ರಕಟಿತ 2018 ಖಾದಿಯನ್)**

---

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

---

*(ಪುಟ ಸಂಖ್ಯೆ 06ರ ಉಳಿದ ಭಾಗ)*

ಬೇರೆ ಶಹೀದರರನ್ನು ಕರೆದೊಯ್ಯಲಾಗುತ್ತಿತ್ತು ಎಂದು ಹಝ್ರತ್ ಇಬ್ನ್ ಅಬ್ಬಾಸ್ ವಿವರಿಸುತ್ತಾರೆ ಎಂದು ಸುನನ್ ಇಬ್ನ್ ಮಾಜಾದಲ್ಲಿ ಹೇಳಲಾಗಿದೆ. (ಸುನನ್ ಇಬ್ನ್ ಮಾಜಾ, ಕಿತಾಬುಲ್ ಜನಾಎಝ್, ಹದೀಸ್-1513)

ಅವರೂ ಇದನ್ನು ತಪ್ಪಾಗಿ ಅರ್ಥೈಸಿಕೊಂಡಿರಬಹುದು. ಸುನನ್ ಅಬುದಾವೂದ್‌ನಲ್ಲಿ ವಿವರಿಸಲಾಗಿದೆ. ಹಝ್ರತ್ ಅನಸ್ ಬಿನ್ ಮಾಲಿಕ್(ರ) ರವರು ಉಹುದ್ ಯುದ್ಧದ ಹುತಾತ್ಮರನ್ನು ಸ್ನಾನ ಮಾಡಿಸಲಿಲ್ಲ ಮತ್ತು ಅವರೆಲ್ಲರಿಗೆ ಅವರ ರಕ್ತದಲ್ಲಿಯೇ ಅಂದರೆ ಗಾಯಗಳೊಂದಿಗೆ ದಫನ್ ಮಾಡಲಾಯಿತು ಮತ್ತು ಅವರಲ್ಲಿ ಯಾರ ನಮಾಝೆ ಜನಾಝವನ್ನು ನಿರ್ವಹಿಸಲಿಲ್ಲ ಎಂದು ನರದಿ ಮಾಡುತ್ತಾರೆ.

(ಸುನನ್ ಅಬಿ ದಾವುದ್, ಕಿತಾಬ್ ಅಲ್-ಜನಾಎಝ್, ಹದೀಸ್-3135)

ಸುನನ್ ಅಬಿ ದಾವುದ್‌ನ ವರದಿಯಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರವರು ಉಹುದ್ ಯುದ್ಧದ ಶಹೀದರ ಜನಾಝವನ್ನು ನಿರ್ವಹಿಸಲಿಲ್ಲ.

(ಸುನನ್ ಅಬಿ ದಾವುದ್, ಕಿತಾಬ್ ಅಲ್-ಜನಾಎಝ್, ಹದೀಸ್ ಸಂಖ್ಯೆ-3137)

ಸುನನ್ ತಿರ್ಮಿದಿಯ ಹದೀಸ್‌ನಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ ಹಝ್ರತ್ ಪೈಗಂಬರ್(ಸ)ರು ಉಹುದ್ ಯುದ್ಧದ ಶಹೀದರ ಜನಾಝವನ್ನು ನಿರ್ವಹಿಸಲಿಲ್ಲ ಎಂದು ಹೇಳಲಾಗಿದೆ. (ಸುನನ್ ಅಲ್-ತಿರ್ಮಿದಿ, ಕಿತಾಬ್ ಅಲ್-ಜನಾಎಝ್, ಹದೀಸ್-1016)

ಅವರಲ್ಲಿ ಹೆಚ್ಚಿನವರ ಅಭಿಪ್ರಾಯದಲ್ಲಿ ನಮಾಝೆ ಜನಾಝ ನಿರ್ವಹಿಸಲಿಲ್ಲ ಎಂದಾಗಿದೆ. ಸೀರತ್ ಇಬ್ನೆ ಹಿಶ್ಯಾಮ್ ಮತ್ತು ಸೀರತುಲ್ ಹಲಬೀಯಾದಲ್ಲಿ ಬರೆಯಲಾಗಿದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 28 March 2024, Issue No. 13

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಅಲೈಹಿವಸಲ್ಲಮ್‌ರು ಉಹುದ್‌ನ ಶಹೀದರ ಜನಾಝವನ್ನು ಹೀಗೆ ನಿರ್ವಹಿಸಿದರು ಅಂದರೆ: ಮೊತ್ತಮೊದಲಿಗೆ ಹಝ್ರತ್ ಹಮ್‌ಝಾ(ರ) ಅವರ ಜನಾಝವನ್ನು ನಿರ್ವಹಿಸಲಾಯಿತು. ಅವರು(ಸ) ಜನಾಝ ನಮಾಝಿನಲ್ಲಿ 7 ತಕ್ಬೀರ್‌ಗಳನ್ನು ಹೇಳಿದರು. ಸೀರತ್ ಹಲಬಿಯಾ ಪ್ರಕಾರ ನಾಲ್ಕು ತಕ್ಬೀರ್‌ಗಳನ್ನು ಹೇಳಿದರು. ಅದರ ನಂತರ, ಉಳಿದ ಹುತಾತ್ಮರನ್ನು ಒಬ್ಬೊಬ್ಬರಾಗಿ ತಂದು ಹಝ್ರತ್ ಹಮ್‌ಝಾ(ರ) ಅವರ ಮೃತದೇಹದೊಂದಿಗೆ ಇರಿಸಲಾಯಿತು ಮತ್ತು ಹಝ್ರತ್ ಪೈಗಂಬರ್(ಸ)ರು ಅವರಿಬ್ಬರ ಜನಾಝವನ್ನು ನಿರ್ವಹಿಸಿದರು. ಹೀಗೆ ಉಳಿದ ಎಲ್ಲಾ ಶಹೀದರ ನಮಾಝ್ ಜನಾಝವನ್ನು ಒಂದು ಬಾರಿ ಮತ್ತು ಹಝ್ರತ್ ಹಮ್‌ಝಾ(ರ)ರವರ ಜನಾಝ ನಮಾಝನ್ನು 70 ಬಾರಿ ನಿರ್ವಹಿಸಲಾಯಿತು ಮತ್ತು ಕೆಲವರ ಪ್ರಕಾರ 92 ಬಾರಿ ನಿರ್ವಹಿಸಲಾಯಿತು. (ಸೀರತ್ ಇಬ್ನ ಹಿಶ್ಶಾಮ್, ಪುಟ–395–396, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸ್ಸೀರತುಲ್ ಹಲಬೀಯಾ, ಸಂಪುಟ–2, ಪುಟ–337, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ದಲಾಎಲುನ್ನಬುವ್ವ ಎಂಬ ಒಂದು ಜೀವನಚರಿತ್ರೆಯ ಒಂದು ಪುಸ್ತಕ ಇದೆ ಅದರಲ್ಲಿ ಹಝ್ರತ್ ಹಮ್‌ಝಾ(ರ) ಅವರ ಮೃತದೇಹದ ಬಳಿ ಒಂಬತ್ತು ಶಹೀದರನ್ನು ಒಟ್ಟಿಗೆ ಕರೆತರಲಾಗುತ್ತಿತ್ತು ಮತ್ತು ಅವರ ನಮಾಝ್ ಜನಾಝವನ್ನು ನಿರ್ವಹಿಸಲಾಗುತಿತ್ತು, ನಂತರ ಆ ಒಂಬತ್ತು ಮಂದಿಯನ್ನು ತೆಗೆದುಕೊಂಡು ಇನ್ನೂ ಒಂಬತ್ತು ಶಹೀದರನ್ನು ಕರೆತರಲಾಯಿತು ಮತ್ತು ಈ ಎಲ್ಲಾ ಶಹೀದರ ನಮಾಝ್ ಜನಾಝವನ್ನು ನಿರ್ವಹಿಸಲಾಗುತಿತ್ತು ಹೀಗೆ ಉಳಿದ ಎಲ್ಲಾ ಶಹೀದರ ನಮಾಝ್ ಜನಾಝವನ್ನು ನಿರ್ವಹಿಸಲಾಯಿತು. ಹಝ್ರತ್ ಪೈಗಂಬರ್(ಸ)ರವರು ಪ್ರತಿ ಬಾರಿಯು ನಮಾಝ್ ಜನಾಝದಲ್ಲಿ 7 ತಕ್ಬೀರ್‌ಗಳನ್ನು ಹೇಳಿದರು. (ದಲಾಎಲುನ್ನಬುವ್ವ, ಭಾಗ–3, ಪುಟ–287, ದಾರುಲ್–ರಯಾನ್, ಖಾಹಿರ, 1988)

ಉಹುದ್ ಯುದ್ಧದ ಶಹೀದರ ನಮಾಝ್ ಜನಾಝದ ಬಗ್ಗೆ ಹದೀಸ್‌ಗಳನ್ನು ಸೀರತ್ ಹಲಬಿಯಾ ಮತ್ತು ದಲಾಯಿಲ್ ಅಲ್–ನುಬುವಾದಲ್ಲಿ ಚರ್ಚಿಸಲಾಗಿದೆ ಮತ್ತು ಈ ಎರಡು ಪುಸ್ತಕಗಳಲ್ಲಿ, ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಅವರ ವರದಿ. ಹಝ್ರತ್ ಪೈಗಂಬರ್(ಸ)ರವರು ಉಹುದ್ ಯುದ್ಧದ ಶಹೀದರಿಗೆ ಅವರ ರಕ್ತದಲ್ಲಿಯೇ ದಫನ್ ಮಾಡಲು ಆದೇಶಿಸಿದರು, ಅವರಿಗೆ ಸ್ನಾನ ಮಾಡಿಸಲಿಲ್ಲ ಅಥವಾ ಅವರ ಜನಾಝ ನಮಾಝನ್ನು ನಿರ್ವಹಿಸಲಿಲ್ಲ. ಇದು ಪ್ರಬಲವಾಗಿದೆ ಎಂದು ಘೋಷಿಸಲಾಗಿದೆ. (ಅಸ್ಸೀರತುಲ್ ಹಲಬಿಯಾ, ಸಂಪುಟ–2, ಪುಟ–338, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ದಲಾಎಲುನ್ನಬುವ್ವ, ಭಾಗ–3, ಪುಟ–287–288, ದಾರುಲ್ ರೈಯಾನ್ ಖಾಹಿರಾ 1988)

ಒಟ್ಟಿನಲ್ಲಿ ಹೇಳುವುದಾದರೆ ಜನಝವನ್ನು ನಿರ್ವಹಿಸಲಿಲ್ಲ.

ಹಝ್ರತ್ ಇಮಾಂ ಶಾಫೀ ಹೇಳುತ್ತಾರೆ: ಅನೇಕ ವರದಿಗಳಿಂದ ಸ್ಪಷ್ಟವಾಗಿ ಗೊತ್ತಾಗುವ ಸಂಗತಿಯೇನೆಂದರೆ, ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದ ಶಹೀದರ ಜನಾಝ್ ನಮಾಝ್ ನಿರ್ವಹಿಸಿರಲಿಲ್ಲ. ಹಝ್ರತ್ ಪೈಗಂಬರ್(ಸ) ಆ ಶಹೀದರ ಜನಾಝ್ ನಮಾಝ್ ನಿರ್ವಹಿಸಿದರು ಮತ್ತು ಹಝ್ರತ್ ಹಂಝ(ರ)ರಿಗಾಗಿ ಎಪ್ಪತ್ತು ತಕ್ಬೀರ್‌ಗಳನ್ನು ಹೇಳಿದ್ದರು ಎಂಬ ಪ್ರಸ್ತಾಪ ಬರುವ ವರದಿಗಳು ಸರಿಯಲ್ಲ. ರಸೂಲುಲ್ಲಾಹ್(ಸ) ಎಂಟು ವರ್ಷಗಳ ನಂತರ ಆ ಶಹೀದರ ಜನಾಝ್ ನಮಾಝ್ ನಿರ್ವಹಿಸಿದ್ದರು ಎಂಬ ವರದಿಯ ಬಗ್ಗೆ ಹೇಳುವುದಾದರೆ, ಆ ಘಟನೆ ಎಂಟು ವರ್ಷ ನಂತರದ್ದು ಎಂದು ಆ ವರದಿಯಲ್ಲೇ ಇದೆ.

ಇಮಾಂ ಬುಖಾರಿ(ರಹ್) ರವರು ತಮ್ಮ ಪುಸ್ತಕದಲ್ಲಿ, **ಬಾಬ್ ಅಸ್ಸಲಾತು ಅಲಶ್ಶಹೀದ್** ಅಂದರೆ ಶಹೀದರ ನಮಾಝ್ ಜನಾಝ ಎಂಬ ಶೀರ್ಷಿಕೆಯೊಂದಿಗೆ ಅಧ್ಯಾಯವನ್ನು ಕಟ್ಟಿದ್ದಾರೆ ಮತ್ತು ಅದರ ಅಡಿಯಲ್ಲಿ ಕೇವಲ ಎರಡು ಹದೀಸ್‌ಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಮೊದಲ ಹದೀಸ್ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ರವರು ವರದಿ ಮಾಡಿದ್ದಾರೆ ಅದರಲ್ಲಿ ಸ್ಪಷ್ಟವಾಗಿ ಉಹುದ್ ಯುದ್ಧದ ಶಹೀದರಿಗೆ ಸ್ನಾನ ಮಾಡಿಸಲಿಲ್ಲ ಅಥವಾ ನಮಾಝ್ ಜನಾಝವನ್ನು ನಿರ್ವಹಿಸಲಿಲ್ಲ ಎಂದು ಉಲ್ಲೇಖಿಸಲಾಗಿದೆ, ಆದರೆ ಎರಡನೇ ಹದೀಸ್‌ನಲ್ಲಿ ಅದನ್ನು ಹಝ್ರತ್ ಉಕ್ಬಾ ಬಿನ್ ಆಮಿರ್(ರ) ವರದಿ ಮಾಡುತ್ತಾರೆ. ಅವರು(ರ) ಹೇಳುತ್ತಾರೆ **ಅನ್ನನ್ನಬಿಯ್ಯ ಖರಜ ಯೌಮನ್ ಫಸಲ್ಲಾ ಅಲಾ ಅಹ್ಲಿ ಉಹುದಿನ್ ಸಲಾತಹೂ ಅಲಲ್ ಮೈಯಿತಿ–** ಒಂದು ದಿನ, ಹಝ್ರತ್ ಪೈಗಂಬರ್(ಸ)ರವರು ಹೊರಗೆ ಹೋಗಿ ಉಹುದ್ ಶಹೀದರ ನಮಾಝ್ ಜನಾಝವನ್ನು ನಿರ್ವಹಿಸಿದರು. ಅಲ್ಲಿ ಅದೇ ಸಹಾಬಿಯವರು ವರದಿ ಮಾಡಿದ್ದಾರೆ ಮತ್ತು ಹೇಳುತ್ತಾರೆ **ಸಲ್ಲ ರಸೂಲುಲ್ಲಾಹಿ ಅಲಾ ಖತ್ಲಾ ಉಹುದಿನ್ ಬಅದ ಸಮಾನಿಯ ಸಿನೀನ ಕಲ್ ಮುವದ್ದಿ ಇಲಿಲ್ ಅಹ್ಯಾಇ ವಲ್ ಅಮ್ವಾತಿ** ಅಂದರೆ ಹಝ್ರತ್ ಪೈಗಂಬರ್(ಸ)ರವರು ಎಂಡು ವರ್ಷಗಳ ನಂತರ ಉಹುದ್‌ನ ಶಹೀದರ ನಮಾಝ್ ಜನಾಝವನ್ನು ನಿರ್ವಹಿಸಿದರು.

ಜಮಾಅತ್ ಕೂಡ ಅದೇ ನಿಲುವನ್ನು ಹೊಂದಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಬರೆಯುತ್ತಾರೆ: ಆ ಸಮಯದಲ್ಲಿ ನಮಾಝ್ ಜನಾಝವನ್ನು ನೆರವೇರಿಸದಿದ್ದರೂ. ಇದು ಸ್ಪಷ್ಟವಾಗಿದೆ. ಉಹುದ್‌ನ ಶಹೀದರಿಗೆ ನಮಾಝ್ ಜನಾಝವನ್ನು ನಿರ್ವಹಿಸಲಿಲ್ಲ ಎಂಬ ಅಂಶಕ್ಕೆ ವರದಿಗಳು ಪರವಾಗಿವೆ. ನಮಾಝ್ ಜನಾಝವನ್ನು ನಿರ್ವಹಿಸಲಿಲ್ಲ ಎಂದು ಅವರು ಬರೆದಿದ್ದಾರೆ, ಆದರೆ ನಂತರ ಅವರ ಮರಣದ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಮರಣದ ಸಮಯ ಸಮೀಪಿಸಿದಾಗ, ಹಝ್ರತ್ ಪೈಗಂಬರ್(ಸ)ರು ವಿಶೇಷವಾಗಿ ಶಹೀದರ ನಮಾಝ್ ಜನಾಝವನ್ನು ನಿರ್ವಹಿಸಿದರು ಮತ್ತು ಅವರಿಗಾಗಿ ಬಹಳ ನೋವಿನಿಂದ ದುಆ ಮಾಡಿದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿ ಎಂ.ಎ(ರ), ಪುಟ–502) ಇದರ ಇನ್ನು ವಿವರಗಳು ಇವೆ, ಅವುಗಳನ್ನು ಮುಂದೆ ವಿವರಿಸಲಾಗುವುದು ಇನ್‌ಶಾಅಲ್ಲಾಹ್.

ಲೋಕದ ಸ್ಥಿತಿಗತಿಗಳ ಬಗ್ಗೆಯೂ ಸ್ವಲ್ಪ ಹೇಳುತ್ತೇನೆ. ಯುದ್ಧದ ಬೆಂಕಿ ಈಗಂತು ಹರಡುತ್ತಾ ಇದೆ.

ಮನುಕುಲವನ್ನು ನಾಶದಿಂದ ರಕ್ಷಿಸಲು ಈಗ ಬಹಳ ಪ್ರಾರ್ಥನೆಗಳ ಅಗತ್ಯವಿದೆ. ಅಹ್ಮದಿಯರೇ ಸತ್ಯದಲ್ಲಿ ಸರಿಯಾಗಿ ದುಆ ಮಾಡಿದರೆ ಅದಕ್ಕಾಗಿ ಏನಾದರೂ ಮಾಡಬಹುದಾಗಿದೆ.

ಇಸ್ರೇಲ್ ಸರಕಾರ ತನ್ನ ಹಠದಲ್ಲಿ ನಿಂತಿದೆ. ಇಂತಿಂತಹ ಕಾರಣಗಳಿಂದ ನಾವು ಹೀಗೆ ಮಾಡಿದೆವು ಎಂದು ಪ್ರತಿಯೊಂದು ಸಂಗತಿಯಲ್ಲೂ ಅದು ತನ್ನ ಏನಾದರೂ ನೆಪ ಅಥವಾ ಕಾರಣವನ್ನು ಹುಡುಕಿ ಹೇಳುತ್ತದೆ. ಅದು ಯಾವುದೇ ಬುದ್ಧಿಯ ಮಾತನ್ನು ಒಪ್ಪಲು ತಯಾರಾಗುವುದಿಲ್ಲ. ಲೋಕದ ಇತರ ಶಕ್ತಿಶಾಲಿ ಸರಕಾರಗಳು ಇಷ್ಟ ಬಂದಂತೆ ವರ್ತಿಸುತ್ತವೆ ಅಥವಾ ಅವುಗಳಿಗೂ ಭಯವಿದೆ. ಯುದ್ಧವಿರಾಮ ಆಗಬೇಕು, ದೌರ್ಜನ್ಯ ಕೊನೆಗೊಳ್ಳಬೇಕು ಎಂದು ಅವುಗಳು ಮೊದಲು ತಮ್ಮ ಹೇಳಿಕೆಯನ್ನು ನೀಡುತ್ತವೆ. ಅನಂತರ ಇಸ್ರೇಲಿನ ಪ್ರಧಾನ ಮಂತ್ರಿ ಅಥವಾ ಅವರ ಸರ್ಕಾರ ಹೇಳಿಕೆ ನೀಡುವಾಗ ಅದನ್ನು ಬೆಂಬಲಿಸುತ್ತವೆ.

ಅಲ್ಲಾಹನು ಮುಸ್ಲಿಮರ ಮೇಲೂ ಕರುಣೆದೋರಲಿ. ಅವರನ್ನು ಕೂಡ ಅಲ್ಲಾಹನ ಕಡೆಗೆ ಬಾಗಿಸಲಿ. ಇದೇ ಒಂದು ಮಾರ್ಗ ಇರುವುದು. ಅವನ ಅಭಯದಲ್ಲಿ ಬಂದು ಈ ಜನರು ತಮ್ಮ ಇಹಲೋಕ ಮತ್ತು ಪರಲೋಕವನ್ನು ಸರಿಪಡಿಸಬಹುದಾಗಿದೆ. ಅಲ್ಲಾಹನು ಅವರ ಮೇಲೆ ಕೃಪೆದೋರಲಿ. ಅಲ್ಲಾಹನು ನಮಗೂ ದುಆಗಳನ್ನು ಮಾಡಲು ಸೌಭಾಗ್ಯ ನೀಡಲಿ ಮತ್ತು ನಮ್ಮ ಮೇಲೂ ಕರುಣೆದೋರಲಿ.

...*...*...*...

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.